ಮಣ್ಣಿನ ಮನೆ

ಪ್ರಗತಿ ಪ್ರಕಾಶನ
ಮಾಸ್ಕೋ

ಚಿತ್ರಗಳು:
ಯೆವ್ಗೇನಿ ರಾಚೆವ್

ಮಣ್ಣಿನ ಮನೆ

ಪ್ರಾಣಿಗಳ ಕುರಿತು ರಷ್ಯನ್
ಜಾನಪದ ಕಥೆಗಳು

ಪ್ರಾಣಿಗಳ ಕುರಿತು ರಷ್ಯನ್ ಜಾನಪದ ಕಥೆಗಳಲ್ಲಿ ಕೆಲವನ್ನು ಇಲ್ಲಿ ಆಯ್ದು ಕೊಡಲಾಗಿದೆ. ಇವೆಲ್ಲ ತಮ್ಮ ವಿಲಕ್ಷಣತೆಯಿಂದ ಆಕರ್ಷಣೀಯವಾಗಿವೆ, ಕುತೂಹಲ ಕೆರಳಿಸುವಂತಹವಾಗಿವೆ. ಮಕ್ಕಳಿಗೆಂದು ರಚಿತವಾಗಿದ್ದರೂ ಇವು ಚಿಕ್ಕವರಿಗೂ ದೊಡ್ಡವರಿಗೂ ಎಲ್ಲರಿಗೂ ಮೆಚ್ಚಿಗೆಯಾಗುತ್ತವೆ. ಇವುಗಳಲ್ಲಿ ಪ್ರಾಣಿಗಳೂ ಪಕ್ಷಿಗಳೂ ಮನುಷ್ಯರಂತೆಯೇ ಮಾತನಾಡುತ್ತವೆ, ಮನುಷ್ಯರಂತೆಯೇ ಚಿಂತಿಸುತ್ತವೆ, ಮನುಷ್ಯರಂತೆಯೇ ವರ್ತಿಸುತ್ತವೆ. ಅವುಗಳಲ್ಲೂ ಕೆಲವು ಒಳ್ಳೆಯವು, ಕೆಲವು ಕೆಟ್ಟವು. ಕೆಲವು ಧೈರ್ಯಶಾಲಿಯಾದವು, ಕೆಲವು ಅಂಜುಕುಳಿಗಳು. ಕೆಲವು ಮೂರ್ಖಶಿಖಾಮಣಿಗಳಾದರೆ ಇನ್ನು ಕೆಲವು ಬಹಳ ಬುದ್ಧಿಶಾಲಿಯಾದವು.

ಇಲ್ಲಿ ಕೊಟ್ಟಿರುವುವೆಲ್ಲ ಜಾನಪದ ಕಥೆಗಳು. ಇವನ್ನು ಸುಪ್ರಸಿದ್ಧ ರಷ್ಯನ್ ಸಾಹಿತಿ ಅಲೆಕ್ಸೇಯ್ ತೊಲ್ಸ್ತೋಯ್‌ರವರು ಪುಟಾಣಿ ಮಕ್ಕಳಿಗಾಗಿ ಹೇಳಿರುವಂತೆ ನೀಡಲಾಗಿದೆ. ಇವಕ್ಕೆ ಹೆಸರಾಂತ ರಷ್ಯನ್ ಕಲಾವಿದ ಯೆವ್ಗೇನಿ ರಾಚೆವ್ ಸೊಗಸಾದ ಚಿತ್ರಗಳನ್ನು ಬಿಡಿಸಿದ್ದಾರೆ. ಈ ಚಿತ್ರಗಳು ನಮ್ಮನ್ನು ಒಂದು ರಮ್ಯ ಪ್ರಪಂಚಕ್ಕೆ ಕರೆದೊಯ್ಯುತ್ತವೆ. ಅವನ್ನು ನೋಡುವುದೇ ಒಂದು ಆನಂದ.

ವಿಷಯ ಸೂಚಿ

ಟರ್ನಿಪ್ ಗೆಡ್ಡೆ 8
ಮಣ್ಣಿನ ಮನೆ 12
ತೋಳ ಮತ್ತು ಮೇಕೆಯ ಮರಿಗಳು . . . 24
ನರಿ ಮತ್ತು ಮೈನಾ ಹಕ್ಕಿ 32
ರೈತ ಮತ್ತು ಕರಡಿ 42
ನರಿ ಮತ್ತು ಕೊಕ್ಕರೆ 46
ಜಂಭಗಾರ ಮೊಲ 50
ಕರಡಿ ಮತ್ತು ನರಿ 54
ಬೂದುಬೆಕ್ಕು, ಹೋತ ಮತ್ತು ಟಗರು . . 60
ಪುಟ್ಟ ಹುಡುಗಿ ಮತ್ತು ಬಾತುಕೋಳಿಗಳು . 68

ಟರ್ನಿಪ್ ಗೆಡ್ಡೆ

ಒಂದೂರಿನಲ್ಲಿ ಒಬ್ಬ ಅಜ್ಜ ಇದ್ದ. ಅವನು ಒಂದು ದಿನ ತನ್ನ ಮನೆಯ ಅಂಗಳದಲ್ಲಿ ಒಂದು ಟರ್ನಿಪ್ ಗೆಡ್ಡೆಯನ್ನು ನೆಟ್ಟ. ಅದನ್ನು ಬೇಗ ಕಿತ್ತು ಪಲ್ಯ ಮಾಡಿಕೊಂಡು ತಿನ್ನಬೇಕು ಅಂತ ಅವನಿಗೆ ಆಸೆ. ಅವನು ಅದರ ಮುಂದೆ ನಿಂತು ಹೇಳ್ತಾನೆ:

"ಟರ್ನಿಪ್ ಗೆಡ್ಡೆ, ಟರ್ನಿಪ್ ಗೆಡ್ಡೆ, ಬೇಗ ಬೇಗ ಬೆಳಿ. ಸೀಯಾಗಿ ಬೆಳಿ, ಗಟ್ಟಿಯಾಗಿ ಬೆಳಿ, ದಪ್ಪನಾಗಿ ಬೆಳಿ!"

ಟರ್ನಿಪ್ ಗೆಡ್ಡೆಯೇನೋ ಹಾಗೆಯೇ ಬೆಳೆಯಿತು – ದಪ್ಪನಾಗಿ, ಸೀಯಾಗಿ, ಗಟ್ಟಿಯಾಗಿ. ಅಜ್ಜನಿಗೆ ತುಂಬ ಸಂತೋಷವಾಯಿತು. ತಕ್ಷಣ ಕೀಳೋಕೆ ಹೋದ. ಎಲೆಗಳನ್ನು ಹಿಡಿದು ಕೊಂಡು ಎಳೆದಾ, ಎಳೆದಾ. ಆದರೆ ಗೆಡ್ಡೆ ಮೇಲಕ್ಕೆ ಬರಲೇ ಇಲ್ಲ.

ಅಜ್ಜ ಅಜ್ಜಿಯನ್ನು ಕರೆದ.

ಅಜ್ಜಿ ಅಜ್ಜನನ್ನು ಹಿಡಿದುಕೊಂಡಳು, ಅಜ್ಜ ಗೆಡ್ಡೆಯನ್ನು ಹಿಡಿದುಕೊಂಡ. ಇಬ್ಬರೂ ಎಳೆದರೂ ಎಳೆದರೂ, ಗೆಡ್ಡೆ ಬರಲೇ ಇಲ್ಲ.

ಅಜ್ಜಿ ತನ್ನ ಮೊಮ್ಮಗಳನ್ನು ಕರೆದಳು.

ಆ ಪುಟ್ಟ ಹುಡುಗಿ ಅಜ್ಜಿಯನ್ನು ಹಿಡಿದುಕೊಂಡಳು, ಅಜ್ಜಿ ಅಜ್ಜನನ್ನ, ಅಜ್ಜ ಗೆಡ್ಡೆಯನ್ನ. ಮೂವರೂ ಎಳೆದರೂ ಎಳೆದರೂ, ಗೆಡ್ಡೆ ಬರಲೇ ಇಲ್ಲ.

ಪುಟ್ಟ ಹುಡುಗಿ ನಾಯಿಯನ್ನು ಕರೆದಳು.

ನಾಯಿ ಹುಡುಗಿಯನ್ನು ಹಿಡಿದುಕೊಂಡಿತು, ಹುಡುಗಿ ಅಜ್ಜಿಯನ್ನ, ಅಜ್ಜಿ ಅಜ್ಜನನ್ನ, ಅಜ್ಜ ಗೆಡ್ಡೆಯನ್ನ. ಎಲ್ಲರೂ ಎಳೆದರೂ ಎಳೆದರೂ. ಆದರೂ ಅದು ಬರಲಿಲ್ಲ.

ನಾಯಿ ಬೆಕ್ಕನ್ನು ಕರೆಯಿತು.

ಬೆಕ್ಕು ನಾಯಿಯನ್ನ, ನಾಯಿ ಹುಡುಗಿಯನ್ನ, ಹುಡುಗಿ ಅಜ್ಜಿಯನ್ನ, ಅಜ್ಜಿ ಅಜ್ಜನನ್ನ,

ಅಜ್ಜ ಗೆಡ್ಡೆಯನ್ನ ಹಿಡಿದುಕೊಂಡು ಎಳೆದರೂ ಎಳೆದರೂ. ಆದರೂ ಅದು ಬರಲೇ ಇಲ್ಲ.

ಆಮೇಲೆ ಬೆಕ್ಕು ಇಲಿಯನ್ನು ಕರೆಯಿತು.

ಇಲಿ ಬೆಕ್ಕನ್ನ, ಬೆಕ್ಕು ನಾಯಿಯನ್ನ, ನಾಯಿ ಹುಡುಗಿಯನ್ನ, ಹುಡುಗಿ ಅಜ್ಜಿಯನ್ನ, ಅಜ್ಜಿ ಅಜ್ಜನನ್ನ, ಅಜ್ಜ ಗೆಡ್ಡೆಯನ್ನ ಹಿಡಿದುಕೊಂಡು ಎಳೆದರೂ, ಎಳೆದರೂ...

ಕೊನೆಗೆ.... ಅಂತೂ ಅದು ಬಂತು!

ಮಣ್ಣಿನ ಮನೆ

ಒಂದು ಸಾರಿ ಒಬ್ಬ ರೈತ ಸಂತೆಗೆ ಒಂದಿಷ್ಟು ಮಡಕೆಯನ್ನು ಕುದುರೆ ಬಂಡಿಯಲ್ಲಿ ತಗೊಂಡು ಹೋಗ್ತಾ ಇದ್ದ. ರಸ್ತೆಯಲ್ಲಿ ಒಂದು ಮಡಕೆ ಬಿದ್ದು ಹೋಯಿತು.

ಸ್ವಲ್ಪ ಹೊತ್ತಾದ ಮೇಲೆ ಆ ಕಡೆಗೆ ಒಂದು ನೊಣ ಬಂತು. ಮಡಕೆ ಅದರ ಕಣ್ಣಿಗೆ ಬಿತ್ತು. ಅದು ಕೇಳುತ್ತೆ:

"ಯಾರದ್ದು ಈ ಮಣ್ಣಿನ ಮನೆ? ಯಾರು ವಾಸವಾಗಿರೋದು ಇದರಲ್ಲಿ?"

ಒಳಗೆ ನೋಡುತ್ತೆ – ಯಾರೂ ಇಲ್ಲ. ಒಳಗೆ ಹೋಯಿತು, ಅದನ್ನು ತಾನೇ ತನ್ನ ಮನೆಯನ್ನಾಗಿ ಮಾಡಿಕೊಂಡಿತು.

ಸ್ವಲ್ಪ ಹೊತ್ತಾದ ಮೇಲೆ ಒಂದು ಸೊಳ್ಳೆ ಅಲ್ಲಿಗೆ ಬಂತು. ಮಡಕೆಯನ್ನು ನೋಡಿ ಕೇಳುತ್ತೆ:

"ಯಾರದ್ದು ಈ ಮಣ್ಣಿನ ಮನೆ? ಯಾರು ವಾಸವಾಗಿರೋದು ಇದರಲ್ಲಿ?"

"ನಾನು ನೊಯ್ಯೋ ನೊಣ. ನೀನು ಯಾರು?"

"ನಾನು ಸೊಯ್ಯೋ ಸೊಳ್ಳೆ."

"ಬಾ ಒಳಗೆ. ಇಬ್ಬರೂ ಇಲ್ಲಿ ವಾಸ ಮಾಡೋಣ."

ಅವೆರಡೂ ಆ ಮಡಕೆಯನ್ನು ತಮ್ಮ ಮನೆಯನ್ನಾಗಿ ಮಾಡಿಕೊಂಡವು.

ಸ್ವಲ್ಪ ಹೊತ್ತಾದ ಮೇಲೆ ಒಂದು ಇಲಿ ಅಲ್ಲಿಗೆ ಬಂತು. ಅದು ಕೇಳುತ್ತೆ:

"ಯಾರದ್ದು ಈ ಮಣ್ಣಿನ ಮನೆ? ಯಾರು ವಾಸಿಸುತ್ತಿರೋದು ಇದರಲ್ಲಿ?"

"ನಾವು ನೊಯ್ಯೋ ನೊಣ, ಸೊಯ್ಯೋ ಸೊಳ್ಳೆ. ನೀನು ಯಾರು?"

"ನಾನು ಕೀಚೋ ಇಲಿ."

"ಬಾ ಒಳಗೆ. ವಾಸ ಮಾಡೋಣ."

ಇಲಿ ಒಳಗೆ ಹೋಯಿತು. ಅವು ಮೂರೂ ಆ ಮಡಕೆಯನ್ನು ತಮ್ಮ ಮನೆಯನ್ನಾಗಿ ಮಾಡಿಕೊಂಡವು.

ಸ್ವಲ್ಪ ಹೊತ್ತಾದ ಮೇಲೆ ಒಂದು ಕಪ್ಪೆ ಅಲ್ಲಿಗೆ ಕುಪ್ಪಳಿಸಿಕೊಂಡು ಬಂತು. ಅದು ಕೇಳುತ್ತೆ:



"ಯಾರದ್ದು ಈ ಮಣ್ಣಿನ ಮನೆ? ಯಾರು ವಾಸಿಸುತ್ತಿರೋದು ಇದರಲ್ಲಿ?"

"ನಾವು ನೊಯ್ಯೋ ನೊಣ, ಸೊಯ್ಯೋ ಸೊಳ್ಳೆ, ಕೀಚೋ ಇಲಿ. ನೀನು ಯಾರು?"

"ನಾನು ಕುಪ್ಪೋ ಕಪ್ಪೆ."

"ಬಾ ಒಳಗೆ, ವಾಸ ಮಾಡೋಣ."

ಅವು ನಾಲ್ಕೂ ಅಲ್ಲಿ ವಾಸ ಮಾಡತೊಡಗಿದವು.



ಸ್ವಲ್ಪ ಹೊತ್ತಾದ ಮೇಲೆ ಒಂದು ಮೊಲ ಅಲ್ಲಿಗೆ ಓಡಿಕೊಂಡು ಬಂತು. ಅದು ಕೇಳುತ್ತೆ:

"ಯಾರದ್ದು ಈ ಮಣ್ಣಿನ ಮನೆ? ಯಾರು ವಾಸವಾಗಿರೋದು ಇದರಲ್ಲಿ?"

"ನಾವು ನೊಯ್ಯೋ ನೊಣ, ಸೊಯ್ಯೋ ಸೊಳ್ಳೆ, ಕೀಚೋ ಇಲಿ, ಕುಪ್ಪೋ ಕಪ್ಪೆ. ನೀನು ಯಾರು?"

"ನಾನು ಓಡೋ ಮೊಲ. ಗುಡ್ಡದಿಂದ ಗುಡ್ಡಕ್ಕೆ ಚಂಗನೆ ಹಾರಿಕೊಂಡು ಹೋಗ್ತೇನೆ."

"ಒಳಗೆ ಬಾ. ವಾಸ ಮಾಡೋಣ."

ಅವು ಐದೂ ಅಲ್ಲಿ ವಾಸ ಮಾಡತೊಡಗಿದವು.

ಸ್ವಲ್ಪ ಹೊತ್ತಾದ ಮೇಲೆ ಅಲ್ಲಿಗೆ ಒಂದು ನರಿ ಓಡಿಕೊಂಡು ಬಂತು. ಅದು ಕೇಳುತ್ತೆ:

"ಯಾರದ್ದು ಈ ಮಣ್ಣಿನ ಮನೆ? ಯಾರು ವಾಸವಾಗಿರೋದು ಇದರಲ್ಲಿ?"

"ನಾವು ನೊಯ್ಯೋ ನೊಣ, ಸೊಯ್ಯೋ ಸೊಳ್ಳೆ, ಕೀಚೋ ಇಲಿ, ಕುಪ್ಪೋ ಕಪ್ಪೆ, ಓಡೋ ಮೊಲ. ನೀನು ಯಾರು?"

"ನಾನು ಸವಿ ನುಡಿಯೋ ನರಿ."

"ಬಾ ಒಳಗೆ. ವಾಸ ಮಾಡೋಣ."

ಅವು ಆರೂ ಅಲ್ಲಿ ವಾಸ ಮಾಡತೊಡಗಿದವು.

ಸ್ವಲ್ಪ ಹೊತ್ತಾದ ಮೇಲೆ ಒಂದು ತೋಳ ಅಲ್ಲಿಗೆ ಓಡಿಕೊಂಡು ಬಂತು. ಅದು ಕೇಳುತ್ತೆ:

"ಯಾರದ್ದು ಈ ಮಣ್ಣಿನ ಮನೆ? ಯಾರು ವಾಸವಾಗಿರೋದು ಇದರಲ್ಲಿ?"

"ನಾವು ನೊಯ್ಯೋ ನೊಣ, ಸೊಯ್ಯೋ ಸೊಳ್ಳೆ, ಕೀಚೋ ಇಲಿ, ಕುಪ್ಪೋ ಕಪ್ಪೆ, ಓಡೋ ಮೊಲ, ಸವಿ ನುಡಿಯೋ ನರಿ. ನೀನು ಯಾರು?"

"ನಾನು ಹಾರೋ ತೋಳ. ನಿಮಗೆ ಗೊತ್ತ, ನಾನು ಹಿಂದೆ ಮುಂದೆ ನೋಡೋದೇ ಇಲ್ಲ. ನೆಟ್ಟಗೆ ಪ್ರಾಣಿಗಳ ಮೇಲೆ ಹಾರ್ತೀನಿ."

"ಬಾ ಒಳಗೆ. ವಾಸ ಮಾಡೋಣ."

ಅವು ಏಳೂ ಅಲ್ಲಿ ವಾಸ ತೊಡಗಿದವು ಸುಖವಾಗಿ, ಯಾವ ಚಿಂತೆಯೂ ಇಲ್ಲದೆ.

ಒಂದು ದಿನ ಒಂದು ಕರಡಿ ಅಲ್ಲಿಗೆ ಬಂತು. ಆ ಮಣ್ಣಿನ ಮನೆಯ ಬಾಗಿಲು ತಟ್ಟಿ ಕೇಳಿತು:

"ಯಾರದು ಮನೆಯಲ್ಲಿ ವಾಸವಾಗಿರೋದು?"

"ನಾವು ನೊಯ್ಯೋ ನೊಣ, ಸೊಯ್ಯೋ ಸೊಳ್ಳೆ, ಕೀಚೋ ಇಲಿ, ಕುಪ್ಪೋ ಕಪ್ಪೆ, ಓಡೋ ಮೊಲ, ಸವಿ ನುಡಿಯೋ ನರಿ, ಹಾರೋ ತೋಳ. ನೀನು ಯಾರು?"

"ನಾನು ರೇಗೋ ಕರಡಿ. ನನ್ನ ಕೈಗೆ ಏನಾದರೂ ಸಿಕ್ಕಿದರೆ ನೀವೆಲ್ಲ ಚಟ್ನಿ."

ಹಾಗೆಂದು ಕರಡಿ ಆ ಮಡಕೆಯ ಮೇಲೆ ಧೊಪ್ಪನೆ ಕೂತುಕೊಂಡ್ತು... ಮಡಕೆ ಚೂರು ಚೂರಾಯಿತು. ಅದರೊಳಗಿದ್ದ ಏಳು ಮಿತ್ರರೂ ಹೆದರಿ ದಿಕ್ಕಾಪಾಲಾಗಿ ಓಡಿದರು.

ತೋಳ ಮತ್ತು ಮೇಕೆಮರಿಗಳು

ಒಂದಾನೊಂದು ಕಾಲದಲ್ಲಿ ಒಂದು ತಾಯಿ ಮೇಕೆ ತನ್ನ ಮರಿಗಳ ಜೊತೆ ಕಾಡಿನಲ್ಲಿ ವಾಸವಾಗಿತ್ತು. ದಿನವೂ ಬೆಳಿಗ್ಗೆ ಅದು ಹೊರಗೆ ಹೋಗಿ ಕಾಡಿನಲ್ಲಿ ಬೆಳೆದಿದ್ದ ರೇಷ್ಮೆಯಂತೆ ಮೃದುವಾದ ಹುಲ್ಲನ್ನು ಮೇಯ್ದು, ನದಿಯಲ್ಲಿದ್ದ ತಣ್ಣಗಿನ ಸೀನೀರನ್ನು ಕುಡಿದು, ಮನೆಗೆ ಹಿಂದಿರುಗುತ್ತಿತ್ತು. ಅದು ಹೊರಗೆ ಹೋದ ಕೂಡಲೇ, ಮರಿಗಳು ಬಾಗಿಲು ಹಾಕಿಕೊಂಡು ಮನೆಯೊಳಗೇ ಇರುತ್ತಿದ್ದವು. ಒಂದು ಚೂರು ಮುಖವನ್ನು ಕೂಡ ಹೊರಗೆ ತೋರಿಸುತ್ತಿರಲಿಲ್ಲ.

ತಾಯಿ ಮೇಕೆ ಹಿಂದಿರುಗಿ ಬಂದು ಬಾಗಿಲು ತಟ್ಟಿ ಇಂಪಾದ ದನಿಯಲ್ಲಿ ಹೇಳುತ್ತಿತ್ತು:

"ಮುದ್ದು ಮಕ್ಕಳೇ, ಪ್ರೀತಿಯ ಮಕ್ಕಳೇ,
ತೆರೆಯಿರಿ ಬಾಗಿಲು, ಬಂದಿಹೆನು ನಾನು, ನಿಮ್ಮಮ್ಮ!
ತಂದಿಹೆನು ನಿಮಗಾಗಿ ಸಿಹಿ ಹಾಲು ಸಮೃದ್ಧ.
ತುಂಬಿ ತುಳುಕುತ್ತಿಹುದು ಅದು ಕೆಚ್ಚಲಿಂದ,
ಹರಿಯುತಿದೆಯದು ಮೃದುವಾಗಿ ಕಾಲವರೆಗೂ,
ಬೀಳುತಿದೆ ಹನಿಯಾಗಿ ನೆಲದ ಮೇಲೂ."

ಮರಿಗಳು ಬಾಗಿಲು ತೆರೆಯುತ್ತಿದ್ದವು. ತಾಯಿ ಮೇಕೆ ಒಳಬಂದು ಮರಿಗಳಿಗೆ ಹಾಲುಣಿಸಿ ಮತ್ತೆ ಕಾಡಿಗೆ ಹೋಗುತ್ತಿತ್ತು. ಮರಿಗಳು ಮತ್ತೆ ಹಿಂದಿನಂತೆಯೇ ಬಾಗಿಲು ಹಾಕಿಕೊಂಡು ಒಳಗೇ ಇರುತ್ತಿದ್ದವು.

ಒಂದು ತೋಳ ಇದನ್ನೆಲ್ಲ ನೋಡಿಕೊಂಡಿದ್ದು ಒಂದು ದಿನ ತಾಯಿ ಮೇಕೆ ಹೊರಗೆ ಹೋಗಿದ್ದಾಗ ಬಾಗಿಲ ಬಳಿ ಬಂದು ಒರಟು ದನಿಯಲ್ಲಿ ಕೂಗಿ ಹೇಳಿತು:

"ಏಯ್, ಮಕ್ಕಳೇ,
ಏಯ್, ಮರಿಗಳೇ,
ತೆಗೆಯಿರಿ ಬಾಗಿಲು,
ಬಂದಿಹೆನು ನಾನು, ನಿಮ್ಮಮ್ಮ.
ತಂದಿಹೆನು ನಿಮಗಾಗಿ ಸ್ವಲ್ಪ ಹಾಲು,
ಹೊರಸೂಸುತಿದೆ ಅದು ಕೆಚ್ಚಲಿಂದ,
ರೇಷುಮೆಯ ಪಟ್ಟಿಯಂತೆ!"

ಮರಿಗಳು ಹೇಳಿದವು:

"ನೀವು ಹೇಳೋದು ನಮಗೆ ಕೇಳಿಸ್ತಿದೆ. ಆದರೆ ನೀವು ಯಾರೇ ಆದರೂ ನಿಮ್ಮ ದನಿ ನಮ್ಮ ಅಮ್ಮನ ದನಿಯಲ್ಲ! ನಮ್ಮ ಅಮ್ಮ ಸಣ್ಣ ದನಿಯಲ್ಲಿ ಹಾಡ್ತಾಳೆ. ಅವಳು ಹೇಳುವ ಮಾತೂ ಬೇರೆಯೇ."

ಈಗ ತೋಳ ಏನು ಮಾಡಬೇಕು?

ಅದು ಕಮ್ಮಾರನ ಬಳಿಗೆ ಹೋಗಿ ತನಗೊಂದು ಹೊಸ ಸಣ್ಣ ದನಿಯ ಕಂಠ ಮಾಡಿ ಕೊಡಬೇಕೆಂದು ಕೇಳಿಕೊಂಡಿತು. ಕಮ್ಮಾರ ಅದಕ್ಕೆ ಒಂದು ಹೊಸ ಕಂಠ ಮಾಡಿಕೊಟ್ಟ. ಅದು ಓಡಿ ಹೋಗಿ ಮೇಕೆಯ ಮನೆಯ ಹತ್ತಿರವಿರುವ ಒಂದು ಪೊದೆಯ ಹಿಂದೆ ಅಡಗಿ ಕುಳಿತಿತು.

ಸ್ವಲ್ಪ ಹೊತ್ತಾದ ಮೇಲೆ ತಾಯಿ ಮೇಕೆ ಕಾಡಿನಿಂದ ಮನೆಗೆ ಬಂತು. ಬಾಗಿಲು ತಟ್ಟಿ ಮಕ್ಕಳಿಗೆ ಹೇಳಿತು:

"ಮುದ್ದು ಮಕ್ಕಳೇ, ಪ್ರೀತಿಯ ಮಕ್ಕಳೇ,
ತೆರೆಯಿರಿ ಬಾಗಿಲು, ಬಂದಿಹೆನು ನಾನು, ನಿಮ್ಮಮ್ಮ!
ತಂದಿಹೆನು ನಿಮಗಾಗಿ ಸಿಹಿ ಹಾಲು ಸಮೃದ್ಧ.
ತುಂಬಿ ತುಳುಕುತ್ತಿಹುದು ಅದು ಕೆಚ್ಚಲಿಂದ,
ಹರಿಯುತಿದೆಯದು ಮೃದುವಾಗಿ ಕಾಲವರೆಗೂ,
ಬೀಳುತಿದೆ ಹನಿಯಾಗಿ ನೆಲದ ಮೇಲೂ."

ಮರಿಗಳು ಬಾಗಿಲು ತೆರೆದವು. ಅಮ್ಮನಿಗೆ ಎಲ್ಲ ಹೇಳಿದವು – ತೋಳ ಬಂದಿದ್ದು, ತಮ್ಮನ್ನು ತಿನ್ನಲು ಹವಣಿಸಿದ್ದು, ಎಲ್ಲವನ್ನೂ ಹೇಳಿದವು.

ತಾಯಿಮೇಕೆ ಮರಿಗಳಿಗೆ ಹಾಲು ನೀಡಿ, ಖಂಡಿತವಾಗಿ ಹೇಳಿತು:

"ನೋಡಿ ಮಕ್ಕಳೇ, ನಾನಿಲ್ಲದಾಗ ಯಾರೇ ಬಂದು ಬಾಗಿಲು ತೆಗೆಯಿರಿ ಅಂತ ಕೇಳಿದರೂ ಮೊದಲು ಅವರ ದನಿ ಕಿವಿಗೊಟ್ಟು ಕೇಳಿ. ಅವರ ದನಿಯೂ ನನ್ನ ದನಿಯಷ್ಟೆ ಸಣ್ಣದಾಗಿದ್ದು ಅವರೂ ನಾನು ಹೇಳುವ ಮಾತೇ ಹೇಳಿದರೆ, ಆಗಷ್ಟೆ ಬಾಗಿಲು ತೆರೆಯಿರಿ. ಇಲ್ಲದಿದ್ದರೆ ಅವರನ್ನು ಮನೆಯ ಒಳಗೆ ಬಿಡಬೇಡಿ."

ತಾಯಿಮೇಕೆ ಮತ್ತೆ ಕಾಡಿಗೆ ಹೋಯಿತು. ಅದು ಆ ಕಡೆ ಹೋದ ಕೂಡಲೇ ತೋಳ ಈ ಕಡೆಯಿಂದ ಓಡಿಬಂತು. ಬಾಗಿಲು ತಟ್ಟಿ ತುಂಬ ಸಣ್ಣ ದನಿಯಲ್ಲಿ ಹೇಳಿತು:

"ಮುದ್ದು ಮಕ್ಕಳೇ, ಪ್ರೀತಿಯ ಮಕ್ಕಳೇ,
ತೆರೆಯಿರಿ ಬಾಗಿಲು, ಬಂದಿಹೆನು ನಾನು, ನಿಮ್ಮಮ್ಮ!
ತಂದಿಹೆನು ನಿಮಗಾಗಿ ಸಿಹಿ ಹಾಲು ಸಮೃದ್ಧ.
ತುಂಬಿ ತುಳುಕುತ್ತಿಹುದು ಅದು ಕೆಚ್ಚಲಿಂದ,
ಹರಿಯುತಿದೆಯದು ಮೃದುವಾಗಿ ಕಾಲವರೆಗೂ,
ಬೀಳುತಿದೆ ಹನಿಯಾಗಿ ನೆಲದ ಮೇಲೂ."

ಮೇಕೆಮರಿಗಳು ತಮ್ಮ ಅಮ್ಮನೇ ಬಂದಿರುವಳೆಂದು ತಿಳಿದು ಬಾಗಿಲು ತೆರೆದವು. ತೋಳ ಒಳ ನುಗ್ಗಿ ಎಲ್ಲ ಮರಿಗಳನ್ನೂ ತಿಂದು ಹಾಕಿತು. ಆದರೆ ಒಂದು ಪುಟ್ಟ ಮರಿ ಮಾತ್ರ ಒಲೆಯೊಳಗೆ ಅವಿತುಕೊಂಡಿದ್ದರಿಂದ ಅದಕ್ಕೆ ಕಾಣಲಿಲ್ಲ.

ಸ್ವಲ್ಪ ಹೊತ್ತಾದ ಮೇಲೆ ತಾಯಿಮೇಕೆ ಬಂದು ಎಂದಿನಂತೆಯೇ ಇಂಪಾಗಿ ಹಾಡು ಹೇಳಿತು. ಆದರೆ ಯಾರೂ ಬಾಗಿಲು ತೆರೆಯಲೇ ಇಲ್ಲ. ಗಟ್ಟಿಯಾಗಿ ಕೂಗಿ ಕರೆಯಿತು. ಯಾರೂ ಉತ್ತರ ನೀಡಲಿಲ್ಲ. ಹತ್ತಿರ ಹೋಗಿ ನೋಡಿದರೆ ಬಾಗಿಲಿಗೆ ಚಿಲುಕಾನೇ ಹಾಕಿಲ್ಲ. ಅದು ತೆರೆದೇ ಇದೆ. ತಾಯಿಮೇಕೆ ಒಳಗೆ ಓಡಿ ಹೋಗಿ ನೋಡಿತು. ಮನೆ ಖಾಲಿ. ಒಲೆಯ ಬಳಿಗೆ ಹೋದಾಗ ಅದಕ್ಕೆ ಒಳಗೆ ಅವಿತುಕೊಂಡಿದ್ದ ಪುಟ್ಟ ಮರಿ ಕಾಣಿಸಿತು.

ತನ್ನ ಮಕ್ಕಳನ್ನು ತೋಳ ತಿಂದುದನ್ನು ಕೇಳಿ ತಾಯಿ ಮೇಕೆಗೆ ತುಂಬ ದುಃಖವಾಯಿತು. ಬೆಂಚಿನ ಮೇಲೆ ಕುಸಿದು ಬಿದ್ದು ಗಟ್ಟಿಯಾಗಿ ಅಳತೊಡಗಿತು. ಬಿಕ್ಕಿಬಿಕ್ಕಿ ಅಳುತ್ತ ಅದು ಪದೇಪದೇ ಹೇಳಿತು:

"ಮುದ್ದು ಮಕ್ಕಳೇ, ಓ ಪ್ರೀತಿಯ ಮಕ್ಕಳೇ !
ಹೋದೆ ಏಕೆ ನಾನು ನಿಮ್ಮನ್ನು ಒಂಟಿಯಾಗಿ ಬಿಟ್ಟು ?
ತೆರೆದಿರಲ್ಲ ನೀವು ನೀಚ ತೋಳನಿಗೆ ಬಾಗಿಲನ್ನು.
ಇನ್ನೆಂತು ಕಾಣುವುದು ನಾನು ನಿಮ್ಮನ್ನು !"

ತೋಳ ತಾಯಿಮೇಕೆಯ ಮಾತು ಕೇಳಿಸಿಕೊಂಡು ಮನೆಯ ಒಳ ಬಂದು ಹೇಳಿತು:

"ನನ್ನನ್ನೇಕಮ್ಮ ಬಯ್ತೀಯ ನೀಚ ಅಂತ ? ನಾನೇನೂ ನಿನ್ನ ಮಕ್ಕಳನ್ನು ತಿನ್ನಲಿಲ್ಲ. ಸಮಾಧಾನ ಮಾಡಿಕೋ. ಬಾ ಕಾಡಿಗೆ ಹೋಗೋಣ, ಸ್ವಲ್ಪ ಸುತ್ತಾಡಿ ಬರೋಣ."

ಅವು ಕಾಡಿಗೆ ಹೋದವು. ಸ್ವಲ್ಪ ದೂರ ಹೋದಾಗ ಅವುಗಳ ಮುಂದೆ ಒಂದು ಹೊಂಡ ಕಂಡುಬಂತು. ಅದರಲ್ಲಿ ಬೆಂಕಿ ಉರಿಯುತ್ತಿತ್ತು.

ತಾಯಿಮೇಕೆ ತೋಳನಿಗೆ ಹೇಳಿತು.

"ಬಾ, ತೋಳರಾಯ. ನೋಡೋಣ, ಯಾರ ಕೈಲಿ ಈ ಹೊಂಡಾನ ಹಾರೋಕೆ ಆಗುತ್ತೆ ಅಂತ."

ತಾಯಿಮೇಕೆ ದೊಡ್ಡದಾಗಿ ಹಾರಿ ಹೊಂಡವನ್ನು ಸುಲಭವಾಗಿ ದಾಟಿತು. ತೋಳವೂ ಅದರ ಹಿಂದೆಯೇ ಹಾರಿತು. ಆದರೆ ಎಡವಿ ಬೆಂಕಿಯೊಳಕ್ಕೆ ಬಿದ್ದಿತು. ಬೆಂಕಿಯ ಬಿಸಿಗೆ ಅದರ ಹೊಟ್ಟೆ ಒಡೆಯಿತು. ಮೇಕೆಮರಿಗಳು ಅದರೊಳಗಿಂದ ಸುರಕ್ಷಿತವಾಗಿ ಹೊರ ಬಂದು ತಾಯಿ ಬಳಿಗೆ ಓಡಿದವು !
ಅದಾದ ಮೇಲೆ ಅವೆಲ್ಲ ಸುಖದಿಂದ ತುಂಬ ಕಾಲ ಬಾಳಿದವು.

ನರಿ ಮತ್ತು
ಮೈನಾ ಹಕ್ಕಿ

ಒಂದು ಮೈನಾ ಹಕ್ಕಿ ಮರದ ಮೇಲೆ ಗೂಡು ಕಟ್ಟಿ ಮೊಟ್ಟೆ ಇಟ್ಟು ಮರಿಗಳನ್ನು ಮಾಡಿತು. ನರಿಗೆ ಈ ವಿಷಯ ತಿಳಿದು ಆ ಮರದ ಕೆಳಗೆ ಬಂದು ಬುಡವನ್ನು ತನ್ನ ಬಾಲದಿಂದ ಬಡಿಯತೊಡಗಿತು. ಮೈನಾ ಹಕ್ಕಿ ಇದೇನು ಶಬ್ದ ಅಂತ ಹೊರಗೆ ನೋಡಿತು.

"ನೋಡು, ನನ್ನ ಬಾಲದಿಂದ ಈ ಮರಾನ ಕುಯ್ತಾ ಇದೀನಿ. ಆಮೇಲೆ ನಿನ್ನೂ ನಿನ್ನ ಮರಿಗಳನ್ನೂ ತಿಂದು ಹಾಕ್ತೀನಿ!" ಅಂತು ನರಿ.

ಮೈನಾ ಹಕ್ಕಿಗೆ ಗಾಬರಿಯಾಯಿತು. ಅದು ನರಿಯನ್ನು ಬೇಡಿಕೊಂಡಿತು:

"ಮರ ಕಡೀ ಬೇಡ, ನರಿಯಣ್ಣ. ನನ್ನ ಮಕ್ಕಳನ್ನು ಉಳಿಸು. ನಿನಗೆ ಬೇಕಾದಷ್ಟು ಜೇನೂ ಕಡಬೂ ಕೊಡ್ತೀನಿ."

"ಆಗಲಿ. ಹಾಗಾದರೆ ಕೊಡು ಜೇನೂ ಕಡಬೂ. ಮರಾನ ಕಡಿಯೊಲ್ಲ!"

"ಸರಿ, ನನ್ನ ಜೊತೆ ಬಾ" ಅಂತು ಮೈನಾ ಹಕ್ಕಿ.

ನರಿಯೂ ಮೈನಾ ಹಕ್ಕಿಯೂ ಹೆದ್ದಾರಿಗೆ ಬಂದವು. ಮೈನಾ ಮೇಲೆ ಹಾರುತ್ತಿತ್ತು. ನರಿ ಕೆಳಗೆ ಓಡುತ್ತಿತ್ತು.

ಅದೇ ದಾರಿಯಲ್ಲಿ ಒಬ್ಬ ಅಜ್ಜಿಯೂ ಅವಳ ಮೊಮ್ಮಗನೂ ಬರುತ್ತಿದ್ದುದನ್ನು ಮೈನಾ ಕಂಡಿತು. ಅವರು ಒಂದು ಬುಟ್ಟಿ ತುಂಬ ಕಡಬು, ಒಂದು ಜಾಡಿ ತುಂಬ ಜೇನು ತರುತ್ತಿದ್ದರು.

ನರಿ ಪೊದೆ ಹಿಂದೆ ಅವಿತುಕೊಂಡಿತು. ಮೈನಾ ದಾರಿಯಲ್ಲಿ ಕುಂಟುತ್ತ ಕುಂಟುತ್ತ ಹಾರೋದಕ್ಕೆ ಆಗೋದಿಲ್ಲವೇನೋ ಅನ್ನುವಂತೆ ಹೋಗತೊಡಗಿತು. ಸ್ವಲ್ಪ ಹಾರೋದು, ನೆಲಕ್ಕೆ ಬೀಳೋದು. ಸ್ವಲ್ಪ ಹಾರೋದು, ನೆಲಕ್ಕೆ ಬೀಳೋದು.

"ಅಜ್ಜಿ, ಆ ಹಕ್ಕಿ ಹಿಡಿಯೋಣವಾ?" ಹುಡುಗ ಕೇಳಿದ.

"ಅದು ಹೇಗೆ ಸಾಧ್ಯವಪ್ಪ?"

"ಆಗುತ್ತಜ್ಜಿ. ನೋಡು ಅದರ ರೆಕ್ಕೆ ಮುರಿದಿದೆ. ಎಷ್ಟು ಮುದ್ದಾಗಿದೆ ಈ ಹಕ್ಕಿ."

ಅಜ್ಜಿಯೂ ಹುಡುಗನೂ ಕಡಬಿನ ಬುಟ್ಟಿಯನ್ನೂ ಜೇನಿನ ಜಾಡಿಯನ್ನೂ ನೆಲದ ಮೇಲಿಟ್ಟು ಹಕ್ಕಿಯನ್ನು ಹಿಡಿಯಲು ಓಡಿದರು.

ಹಕ್ಕಿ ಬೇಕಂತಲೇ ಅವರನ್ನು ಕಡಬು ಜೇನಿನಿಂದ ದೂರ ದೂರ ಕರೆದೊಯ್ದಿತು. ನರಿ ಸಮಯ ಹಾಳು ಮಾಡಲಿಲ್ಲ. ತನ್ನ ಕೈಲಾಗುವಷ್ಟೂ ಕಡಬು ತಿಂದು ಜೇನು ಕುಡಿದು ಉಳಿದುದನ್ನು ಬಚ್ಚಿಟ್ಟಿತು.

ಮೈನಾ ಹಕ್ಕಿ ತನ್ನ ಗೂಡಿಗೆ ಹಾರಿ ಹೋಯಿತು. ಅದು ಇನ್ನೂ ಗೂಡು ತಲುಪೇ ಇಲ್ಲ, ಆಗಲೇ ನರಿ ಮತ್ತೆ ಕಾಣಿಸಿಕೊಂಡಿತು, ಮರದ ಬುಡವನ್ನು ಬಾಲದಿಂದ ಬಡಿಯ ತೊಡಗಿತು.

"ನೋಡು, ಬಾಲದಿಂದ ಮರಾನ ಕುಯ್ತಾ ಇದೀನಿ. ಆಮೇಲೆ ನಿನ್ನೂ ನಿನ್ನ ಮರಿ ಗಳನ್ನೂ ತಿಂದುಹಾಕ್ತೀನಿ!"

"ಬೇಡ, ನರಿಯಣ್ಣ. ಮರ ಕಡೀಬೇಡ. ನನ್ನ ಮಕ್ಕಳನ್ನು ಉಳಿಸು. ನಿನಗೆ ಬೇಕಾದಷ್ಟು ಬೀರ್ ಕೊಡ್ತೀನಿ ಕುಡಿಯೋಕೆ.

"ಹಾಗಾದರೆ ಬೇಗ ಕೊಡು. ಇಷ್ಟೊಂದು ಕಡಬು ಇಷ್ಟೊಂದು ಜೇನು ತಿಂದು ನನಗೆ ತುಂಬ ಬಾಯಾರಿಕೆ ಆಗಿದೆ!"

ಮೈನಾ ಮತ್ತೆ ಹೆದ್ದಾರಿಯತ್ತ ಮೇಲೆ ಹಾರಿ ಹೋಯಿತು. ನರಿ ಕೆಳಗೆ ಓಡಿ ಹೋಯಿತು.

ದೂರದಲ್ಲಿ ಒಬ್ಬ ಹಳ್ಳಿಯವ ಗಾಡಿಯಲ್ಲಿ ಬೀರ್ ತುಂಬಿದ ಪೀಪಾಯಿ ಒಯ್ಯುತ್ತಿದ್ದು ದನ್ನು ಮೈನಾ ಕಂಡಿತು. ಅದು ಅವನ ಸುತ್ತವೇ ಹಾರಾಡಿತು, ಮೊದಲು ಕುದುರೆ ಮೇಲೆ ಕುಳಿತಿತು, ಆಮೇಲೆ ಪೀಪಾಯಿ ಮೇಲೆ ಕುಳಿತಿತು. ಅದು ಹಳ್ಳಿಯವನನ್ನು ಎಷ್ಟು

ಪೀಡಿಸಿತೆಂದರೆ ಅವನಿಗೆ ಅದನ್ನು ಕೊಲ್ಲಬೇಕು ಅನಿಸಿತು. ಕೊನೆಗೆ ಮೈನಾ ಹಕ್ಕಿ ಪೀಪಾಯಿಯ ಬಿರಡೆ ಮೇಲೆ ಹೋಗಿ ಕುಳಿತಿತು. ಹಳ್ಳಿಯವ ಕೊಡಲಿ ತಗೊಂಡು ಅದರ ಮೇಲೆ ಹೊಡೆದ. ಹಕ್ಕಿ ತಪ್ಪಿಸಿಕೊಂಡಿತು, ಬಿರಡೆ ಕಳಚಿಕೊಂಡಿತು. ಹಳ್ಳಿಯವ ಹಕ್ಕಿಯನ್ನು ಅಟ್ಟಿಸಿಕೊಂಡು ಹೋದ.

ಬೀರ್ ಬೀದಿಯಲ್ಲೆಲ್ಲ ಹೊಳೆಯಂತೆ ಹರಿಯಿತು. ನರಿ ತನಗೆ ತೃಪ್ತಿಯಾಗುವವರೆಗೂ ಕುಡಿಯಿತು. ಆಮೇಲೆ ಹಾಡು ಹೇಳಿಕೊಂಡು ಹೊರಟುಹೋಯಿತು.

ಮೈನಾ ಹಕ್ಕಿ ತನ್ನ ಗೂಡಿಗೆ ಬಂದಾಗ ಆಗಲೇ ನರಿ ಮತ್ತೆ ಮರದ ಬುಡವನ್ನು ಬಾಲ ದಿಂದ ಬಡಿಯುತ್ತಿದ್ದುದನ್ನು ಕಂಡಿತು.

"ಏನು ಮೈನಾ ಹಕ್ಕಿ, ನೀನು ನನಗೆ ತಿಂದು ತೇಗುವಷ್ಟು ಊಟ ಹಾಕಿದೆಯಾ?"

"ಹೌದು."

"ಕುಡಿಯೋಕೆ ಬೇಕಾದಷ್ಟು ಬೀರು ಕೊಟ್ಟೆಯಾ?"

"ಕೊಟ್ಟೆನಲ್ಲ."

"ಈಗ ನನಗೆ ನಗು ಬರುವಂತೆ ಮಾಡು. ಇಲ್ಲದಿದ್ದರೆ ಮರ ಕಡಿದು ಹಾಕ್ತೀನಿ. ನಿನ್ನೂ ನಿನ್ನ ಮರಿಗಳನ್ನೂ ತಿಂದು ಹಾಕ್ತೀನಿ!"

ಮೈನಾ ಹಕ್ಕಿ ನರಿಯನ್ನು ಒಂದು ಹಳ್ಳಿಗೆ ಕರಕೊಂಡು ಹೋಯ್ತು. ಅಲ್ಲಿ ಒಬ್ಬ ಮುದುಕಿ ಹಾಲು ಕರೀತಾ ಇದ್ದಳು. ಮುದುಕ ಅವಳ ಪಕ್ಕದಲ್ಲೇ ಕೂತು ಹುಲ್ಲಿನಿಂದ ಒಂದು ಚಪ್ಪಲಿ ಹೊಲೀತಾ ಇದ್ದ.

ಮೈನಾ ಹಕ್ಕಿ ಮುದುಕಿಯ ಹೆಗಲ ಮೇಲೆ ಹೋಗಿ ಕೂತುಕೊಂಡಿತು.

"ಹಾಗೇ ಇರು. ನಿನ್ನ ಹೆಗಲ ಮೇಲೆ ಮೈನಾ ಕೂತಿದೆ. ನಾನು ಅದನ್ನು ಹೊಡೆದು ಕೊಲ್ತೀನಿ" ಅಂದ ಮುದುಕ. ಮುದುಕಿಯ ಹೆಗಲ ಮೇಲೆ ಜೋರಾಗಿ ಹೊಡೆದ. ಹಕ್ಕಿ ತಪ್ಪಿಸಿಕೊಂಡಿತು.

ಮುದುಕಿ ಕೆಳಕ್ಕೆ ಬಿದ್ದಳು. ಹಾಲೆಲ್ಲ ಚೆಲ್ಲಿ ಹೋಯ್ತು. ಎದ್ದು ಕುಳಿತವಳೇ ಮುದುಕಿ ಮುದುಕನನ್ನು ಚೆನ್ನಾಗಿ ಬಯ್ಯತೊಡಗಿದಳು.

ನರಿ ಆ ಮೂರ್ಖ ಮುದುಕನನ್ನು ಕಂಡು ತುಂಬ ಹೊತ್ತು ನಕ್ಕಿತು.

ಮೈನಾ ಹಕ್ಕಿ ಗೂಡಿಗೆ ಹಾರಿ ಹೋಯಿತು. ಮರಿಗಳಿಗೆ ಇನ್ನೂ ಆಹಾರ ಪೂರ್ತಿ ಕೊಟ್ಟಿರ ಲಿಲ್ಲ, ಆಗಲೇ ಮತ್ತೆ ನರಿ ಹಾಜರು. ಅದು ಮರದ ಬುಡವನ್ನು ಬಾಲದಿಂದ ಬಡೀತಿತ್ತು.

"ಏನು, ಮೈನಾ ಹಕ್ಕಿ, ನೀನು ನನಗೆ ತಿಂದು ತೇಗುವಷ್ಟು ಊಟ ಹಾಕಿದೆಯಾ?"

"ಹೌದು."

"ಕುಡಿಯೋಕೆ ಬೇಕಾದಷ್ಟು ಬೀರು ಕೊಟ್ಟೆಯಾ?"

"ಕೊಟ್ಟೆನಲ್ಲ."

"ನನಗೆ ನಗು ಬರುವಂತೆ ಮಾಡಿದೆಯಾ?"

"ಮಾಡಿದೆನಲ್ಲ."

"ಹಾಗಾದರೆ ಈಗ ನನಗೆ ಹೆದರಿಕೆಯಾಗುವಂತೆ ಮಾಡು!"

ಈ ಸಾರಿ ಮೈನಾ ಹಕ್ಕಿಗೆ ತುಂಬ ಕೋಪ ಬಂತು.

"ಸರಿ. ಹಾಗೇ ಆಗಲಿ. ಕಣ್ಣು ಮುಚ್ಚಿಕೊಂಡು ನನ್ನ ಹಿಂದೆಯೇ ಓಡಿ ಬಾ!"

ಮೈನಾ ಹಕ್ಕಿ ಕೂಗುತ್ತ ಹಾರಿಕೊಂಡು ಹೋಯಿತು. ನರಿ ಕಣ್ಣು ಮುಚ್ಚಿಕೊಂಡು ಅದರ ಹಿಂದೆಯೇ ಓಡಿಕೊಂಡು ಹೋಯಿತು. ಮೈನಾ ಹಕ್ಕಿ ಅದನ್ನು ನೇರವಾಗಿ ಬೇಟೆಗಾರರ ಬಳಿಗೆ ಕರೆದುಕೊಂಡು ಹೋಯಿತು. ಅವರ ಬಳಿ ಬೇಟೆನಾಯಿಗಳೂ ಇದ್ದವು.

"ಈಗ ಕಣ್ಣು ಬಿಡು, ನರಿಯಣ್ಣ. ನಿನಗೆ ಹೆದರಿಕೆ ಆಗುತ್ತೆ!"

ನರಿ ಕಣ್ಣು ಬಿಟ್ಟಿತು, ಬೇಟೆನಾಯಿಗಳನ್ನು ಕಂಡಿತು. ದೌಡು ಓಡಿತು. ಬೇಟೆನಾಯಿಗಳು ಅದನ್ನು ಅಟ್ಟಿಸಿಕೊಂಡು ಹೋದವು. ನರಿ ಒಂದು ಬಿಲದೊಳಗೆ ಹೊಕ್ಕಿಕೊಂಡಿತು. ಏದುಸಿರು ಬಿಡುವುದು ನಿಂತು ಸ್ವಲ್ಪ ಸಮಾಧಾನವಾಗುತ್ತಿದ್ದಂತೆ ತನಗೆ ತಾನೇ ಹೇಳಿಕೊಂಡಿತು:

"ಏಯ್, ನನ್ನ ಕಣ್ಣುಗಳೇ, ನೀವೇನು ಮಾಡಿದಿರಿ?"

"ಬೇಟೆನಾಯಿಗಳು ನಿನ್ನನ್ನು ತಿನ್ನದಿರುವಂತೆ ಎಚ್ಚರದಿಂದ ನೋಡಿಕೊಂಡೆವು."

"ಕಿವಿಗಳೇ, ನೀವೇನು ಮಾಡಿದಿರಿ?"

"ಬೇಟೆನಾಯಿಗಳು ನಿನ್ನನ್ನು ನುಂಗದಿರುವಂತೆ ಎಚ್ಚರವಿಟ್ಟು ಕೇಳಿದೆವು."

"ಕಾಲುಗಳೇ, ನೀವೇನು ಮಾಡಿದಿರಿ?"

"ಬೇಟೆನಾಯಿಗಳು ನಿನ್ನನ್ನು ಹಿಡಿಯದಿರುವಂತೆ ಜೋರಾಗಿ ಓಡಿದೆವು."

"ನೀನೇನು ಮಾಡಿದೆ, ಬಾಲ?"

"ನೀನು ಜೋರಾಗಿ ಓಡದಿರಲೆಂದು ಪೊದೆಗಳಿಗೂ ಮರದ ಟೊಂಗೆಗಳಿಗೂ ಸಿಕ್ಕಿಕೊಳ್ಳುತ್ತಿದ್ದೆ."

ನರಿಗೆ ಬಾಲದ ಮೇಲೆ ಕೋಪ ಬಂತು. ಅದನ್ನು ಬಿಲದಿಂದ ಹೊರಕ್ಕೆ ಹಾಕಿತು.

"ಬನ್ನಿ, ಬೇಟೆನಾಯಿಗಳೇ, ನನ್ನ ಬಾಲವನ್ನು ತಿಂದುಹಾಕಿ!"

ಬೇಟೆನಾಯಿಗಳು ಬಾಲ ಹಿಡಿದು ನರಿಯನ್ನು ಬಿಲದಿಂದ ಹೊರಗೆಳೆದು ಹಾಕಿದವು.

ರೈತ ಮತ್ತು ಕರಡಿ

ಒಂದು ಸಾರಿ ಒಬ್ಬ ರೈತ ಕಾಡಿಗೆ ಹೋಗಿ ಟರ್ನಿಪ್ ಗೆಡ್ಡೆಗಳನ್ನು ನೆಡಲು ನೆಲವನ್ನು ಉಳತೊಡಗಿದ. ಅಷ್ಟು ಹೊತ್ತಿಗೆ ಸರಿಯಾಗಿ ಆ ಕಾಡಿನ ಕರಡಿ ಅಲ್ಲಿಗೆ ಬಂತು. ಅದು ಹೇಳಿತು:

"ರೈತ ಭಡವಾ, ನನ್ನ ಕಾಡಿಗೆ ಬಂದು ನೆಲ ಉಳ್ತಾ ಇದೀಯಾ? ತಾಳು, ನಿನ್ನ ಮೂಳೆಗಳನ್ನು ಮುರಿದು ಹಾಕ್ತೀನಿ."

"ಬೇಡಪ್ಪ, ಕರಡಿರಾಯ. ದಯವಿಟ್ಟು ಮೂಳೆ ಮುರೀ ಬೇಡ. ಬದಲು ಈ ಟರ್ನಿಪ್ ಗೆಡ್ಡೆಗಳನ್ನು ಬೆಳೆಯಲು ಬಿಡು. ಬೆಳೆ ಬಂದ ಮೇಲೆ ನೆಲದ ಕೆಳಗಿರುವುದನ್ನು ನಾನು ತಗೋತೀನಿ, ಮೇಲಿರೋದನ್ನೆಲ್ಲ ನೀನು ತಗೋ."

"ಹಾಗೇ ಆಗಲಿ" ಅಂದಿತು ಕರಡಿ. "ನೋಡು, ಮೋಸ ಮಾತ್ರ ಮಾಡಬೇಡ. ಹಾಗೇನಾದರೂ ಮಾಡಿದರೆ ಮತ್ತೆ ನಿನ್ನ ಮುಖ ಈ ಕಡೆಗೆ ತೋರಿಸದ ಹಾಗೆ ಮಾಡ್ತೀನಿ."

EP

ಹಾಗೆಂದು ಹೇಳಿ ಕರಡಿ ಕಾಡಿನ ಒಳಕ್ಕೆ ಹೊರಟುಹೋಯಿತು.

ಟರ್ನಿಪ್ ಗೆಡ್ಡೆಗಳು ದೊಡ್ಡದಾಗಿ ಬೆಳೆದವು. ಶರತ್ಕಾಲದಲ್ಲಿ ರೈತ ಅವುಗಳನ್ನು ಅಗೆದು ತೆಗೆಯಲು ಕಾಡಿಗೆ ಹೋದ. ಕರಡಿ ಕೂಡಲೇ ಹೊರ ಬಂದು ಕೇಳಿತು:

"ಹುಂ, ಎಲ್ಲಪ್ಪ ರೈತ. ಟರ್ನಿಪ್ ಬೆಳೆಯನ್ನು ಪಾಲು ಮಾಡಿಕೊಳ್ಳೋಣ."

"ತುಂಬ ಸಂತೋಷ, ಕರಡಿರಾಯ. ನೆಲದ ಮೇಲಿರೋದೆಲ್ಲ ನಿನ್ನದೇ. ಕೆಳಗಿರೋದಷ್ಟೆ ನನ್ನದು."

ರೈತ ಕರಡಿಗೆ ಎಲೆಗಳನ್ನೆಲ್ಲ ಕೊಟ್ಟ. ತಾನೇ ಗೆಡ್ಡೆಗಳನ್ನು ಗಾಡಿಯಲ್ಲಿ ತುಂಬಿಕೊಂಡು ಮಾರಲು ಪಟ್ಟಣಕ್ಕೆ ಹೊರಟ.

ದಾರಿಯಲ್ಲಿ ಮತ್ತೆ ಕರಡಿ ಸಿಕ್ಕಿತು.

"ಎಲ್ಲಿ ಹೋಗ್ತಿದೀಯಾ ರೈತ?" ಕರಡಿ ಕೇಳಿತು.

"ಪಟ್ಟಣಕ್ಕೆ ಹೋಗ್ತಿದೀನಿ, ಕರಡಿರಾಯ. ಈ ಗೆಡ್ಡೆಗಳನ್ನೆಲ್ಲ ಮಾರೋಣ ಅಂತ."

"ಎಲ್ಲಿ ನಂಗೊಂದು ಚೂರು ಕೊಡು ನೋಡೋಣ. ಅದರ ರುಚಿ ಹೇಗಿರುತ್ತೆ."

ರೈತ ಅದಕ್ಕೆ ಒಂದು ಗೆಡ್ಡೆ ಕೊಟ್ಟ. ಅದರ ರುಚಿ ತಿಳಿದ ಕೂಡಲೇ ಕರಡಿ ಗರ್ಜಿಸಿತು: "ಓಹೋ! ಮೋಸಮಾಡಿದೆಯಾ! ನಿನ್ನ ಗೆಡ್ಡೆ ನನ್ನ ಎಲೆಗಳಿಗಿಂತ ಹೆಚ್ಚು ರುಚಿಯಾಗಿ ದೆಯಲ್ಲ. ಆಗಲಿ ನೀನು ಇನ್ನು ಮುಂದೆ ನನ್ನ ಕಾಡಿಗೆ ಸೌದೆಗೆ ಹೇಗೆ ಬರ್‍ತೀಯ ನೋಡೋಣ. ಬಂದುಗಿಂದರೆ ನಿನ್ನ ಮೈ ಮೂಳೆ ನುಚ್ಚುನೂರು."

ಮಾರನೆಯ ವರ್ಷ ರೈತ ಅದೇ ಜಾಗದಲ್ಲಿ ಜವೆಗೋಧಿ ಬೆಳೆದ. ಬೆಳೆ ಕೊಯ್ಯಲು ಹೋದಾಗ ಮತ್ತೆ ಅಲ್ಲಿ ಕಾದಿತ್ತು ಕರಡಿ ಅವನಿಗಾಗಿ.

"ಈ ಸಾರಿ ನೀನು ನನ್ನ ಮೋಸ ಮಾಡೋಕೆ ಆಗೊಲ್ಲ, ತಿಳೀತ" ಎಂದಿತು ಕರಡಿ. "ನನ್ನ ಪಾಲು ನನಗೆ ಕೊಡು."

"ಹಾಗೇ ಆಗಲಿ. ನಿನಗೆ ನೆಲದ ಕೆಳಗಿರೋದು ಇಷ್ಟ, ತಾನೆ? ಸರಿ, ಅದನ್ನು ನೀನೇ ತಗೋ. ನನಗೆ ನೆಲದ ಮೇಲೆ ಬೆಳೆದಿರೋದೆ ಸಾಕು."

ಅವರು ಜವೆಗೋಧಿ ಬೆಳೆ ಕೊಯ್ಲು ಮಾಡಿದರು. ರೈತ ಕರಡಿಗೆ ಬೇರುಗಳನ್ನೆಲ್ಲ ಕೊಟ್ಟ. ಗೋಧಿಯ ಕಾಳನ್ನೇ ತಾನು ತನ್ನ ಗಾಡಿಗೆ ತುಂಬಿಕೊಂಡು ಮನೆಗೆ ಒಯ್ದ. ಕರಡಿ ಬೇರು ಗಳನ್ನು ಅಗಿದು ಜಗಿದು ತಿಂದಿತು. ಆದರೆ ಅದರಲ್ಲಿ ರುಚಿಯೇ ಇರಲಿಲ್ಲ. ಮರದ ಹೊಟ್ಟು ತಿಂದ ಹಾಗೆ ಇತ್ತು.

ಇದರಿಂದ ಕರಡಿಗೆ ರೈತನ ಮೇಲೆ ತುಂಬ ಕೋಪ ಬಂತು. ಆಗಿನಿಂದ ಕರಡಿಗೂ ರೈತ ನಿಗೂ ಎಣ್ಣೆ ಸೀಗೇಕಾಯಿ.

ನರಿ ಮತ್ತು ಕೊಕ್ಕರೆ

ಒಂದು ನರಿ ಒಂದು ಕೊಕ್ಕರೆ ಆಪ್ತಮಿತ್ರರಾಗಿದ್ದರು. ಒಂದು ಸಾರಿ ನರಿ ತನ್ನ ಗೆಳೆಯ ಕೊಕ್ಕರೆಯನ್ನು ಔತಣಕ್ಕೆ ಕರೆಯಿತು.

"ಕೊಕ್ಕರೆ, ಕೊಕ್ಕರೆ, ನಾಳೆ ನಮ್ಮ ಮನೆಗೆ ಊಟಕ್ಕೆ ಬಾ. ಚೆನ್ನಾದ ಪಾಯಸ ಮಾಡ್ತೀನಿ. ಕುಡಿಯೋಣವಂತೆ !"

ಕೊಕ್ಕರೆ ಒಪ್ಪಿಕೊಂಡು ಮಾರನೆಯ ದಿನ ನರಿಯ ಮನೆಗೆ ಊಟಕ್ಕೆ ಹೋಯಿತು. ನರಿ ಒಂದಿಷ್ಟು ಪಾಯಸ ಮಾಡಿ ಎರಡು ತಟ್ಟೆಗಳಲ್ಲಿ ಹಾಕಿ ಒಂದನ್ನು ತನ್ನ ಮುಂದಿಟ್ಟು ಕೊಂಡು ಇನ್ನೊಂದನ್ನು ಕೊಕ್ಕರೆ ಮುಂದಿರಿಸಿತು.

"ಕುಡಿ, ಕೊಕ್ಕರೆ. ಎಲ್ಲವನ್ನೂ ಕುಡಿದು ಮುಗಿಸಬೇಕು. ತುಂಬ ರುಚಿಯಾಗಿದೆ. ನಾನೇ ಮಾಡಿದೆ," ಅಂತು ನರಿ.

ಕೊಕ್ಕರೆ ತನ್ನ ಉದ್ದವಾದ ಕೊಕ್ಕಿನಿಂದ ತಟ್ಟೆಯನ್ನು ಕುಕ್ಕಿತು. ಕುಕ್ಕಿತೂ ಕುಕ್ಕಿತೂ, ಆದರೆ ಒಂದು ಹನಿ ಪಾಯಸವೂ ಅದರ ಬಾಯಿಗೆ ಹೋಗಲಿಲ್ಲ.

ಈ ಮಧ್ಯೆ ನರಿ ಮಾತ್ರ ತನ್ನ ತಟ್ಟೆಯಲ್ಲಿದ್ದ ಪಾಯಸವನ್ನು ನೆಕ್ಕುತ್ತ ತಿನ್ನತೊಡಗಿತು. ನೆಕ್ಕಿತೂ, ನೆಕ್ಕಿತೂ. ಕೊನೆಗೆ ತಟ್ಟೆಯೆಲ್ಲ ಶುಭ್ರವಾಗಿ ತೊಳೆದಂತಾಯಿತು. ನರಿ ಎಲ್ಲ ಪಾಯಸ ವನ್ನೂ ತಾನೇ ಕುಡಿದು ಮುಗಿಸಿತು.

"ಕೋಪ ಮಾಡಿಕೋ ಬೇಡ, ಕೊಕ್ಕರೆ. ಇಷ್ಟೇ ನನ್ನ ಮನೇಲಿ ಇರೋದು ಇನ್ನೇನೂ ತಿನ್ನೋಕೆ ಇಲ್ಲ."

"ಪರವಾಗಿಲ್ಲ, ನರಿಯಕ್ಕ. ಊಟಕ್ಕೆ ಕರೆದೆಯಲ್ಲ. ಅಷ್ಟೇ ಸಂತೋಷ" ಕೊಕ್ಕರೆ ಹೇಳಿತು. "ಇನ್ನು ನೀನು ನಾಳೆ ನನ್ನ ಮನೆಗೆ ಊಟಕ್ಕೆ ಬರಬೇಕು."

ನರಿ ಕೊಕ್ಕರೆ ಮನೆಗೆ ಊಟಕ್ಕೆ ಹೋಯಿತು. ಕೊಕ್ಕರೆ ಒಂದಿಷ್ಟು ತಿಳಿ ಸಾರು ಮಾಡಿ, ಮೂತಿ ಉದ್ದವಾಗಿ ಸಣ್ಣಗಿದ್ದ ಎರಡು ಹೂಜಿಗಳಲ್ಲಿ ಹಾಕಿ ಒಂದನ್ನು ನರಿ ಮುಂದಿಟ್ಟು ಇನ್ನೊಂದನ್ನು ತನ್ನ ಮುಂದಿಟ್ಟುಕೊಂಡಿತು.

"ಕುಡಿ, ನರಿಯಕ್ಕ. ಎಲ್ಲವನ್ನೂ ಕುಡಿದು ಮುಗಿಸಬೇಕು."

ನರಿ ಹೂಜಿಯ ಸುತ್ತ ಸುತ್ತು ಹಾಕಿತು. ಹೀಗೆ ಕುಡಿಯಲು ಹಾಗೆ ಕುಡಿಯಲು ನೋಡಿತು. ನೆಕ್ಕಿತು, ಮೂಸಿತು. ಆದರೆ ಒಂದು ಹನಿಯೂ ಅದರ ಬಾಯಿಯ ಒಳಕ್ಕೆ ಹೋಗಲಿಲ್ಲ. ಅದರ ತಲೆಗೆ ಹೂಜಿ ಬಾಯಿ ಚಿಕ್ಕದಾಗಿತ್ತು.

ಆದರೆ ಕೊಕ್ಕರೆ ಮಾತ್ರ ತನ್ನ ಉದ್ದ ಕೊಕ್ಕನ್ನು ಹೂಜಿಯ ಒಳಕ್ಕೆ ಹಾಕಿ ಹೀರಿಕೊಂಡು ಎಲ್ಲ ಸಾರನ್ನೂ ಕುಡಿದು ಮುಗಿಸಿತು.

"ಕೋಪ ಮಾಡಿಕೋಬೇಡ, ನರಿಯಕ್ಕ. ಇಷ್ಟೇ ನನ್ನ ಮನೇಲಿರೋದು. ಇನ್ನೇನೂ ತಿನ್ನೋಕೆ ಇಲ್ಲ."

ಆದರೆ ನರಿಗೆ ನಿಜಕ್ಕೂ ಕೋಪ ಬಂತು. ಅದು ಒಂದು ವಾರಕ್ಕೆ ಸಾಕೋಗೋವಷ್ಟು ತಿಂದು ಹೋಗಬೇಕೆಂದು ಬಂದಿತ್ತು. ಈಗ ಎಷ್ಟು ಹಸಿವಿನಿಂದ ಬಂದಿತ್ತೋ ಅಷ್ಟೇ ಹಸಿವಿನಿಂದ ಹಿಂದಕ್ಕೆ ಹೋಗ್ತಾ ಇದೆ. ಕೊಕ್ಕರೆ ಮುಯ್ಯಿಗೆ ಮುಯ್ಯಿ ನೀಡಿತ್ತು.

ಅಂದಿನಿಂದ ನರಿಗೂ ಕೊಕ್ಕರೆಗೂ ಮಧ್ಯೆ ಸ್ನೇಹ ಅನ್ನೋದು ಇಲ್ಲ.

ಜಂಭಗಾರ ಮೊಲ

ಒಂದು ಕಾಡಿನಲ್ಲಿ ಒಂದು ಮೊಲ ವಾಸವಾಗಿತ್ತು. ಬೇಸಿಗೆಯಲ್ಲಿ ಅದರ ಹೊಟ್ಟೇಪಾಡು ಹೇಗೋ ಚೆನ್ನಾಗಿ ನಡೆಯುತ್ತಿತ್ತು. ಆದರೆ ಚಳಿಗಾಲದಲ್ಲೇ ಅದಕ್ಕೆ ಕಷ್ಟವಾಗಿದ್ದುದು, ಅದು ಜೀವದಿಂದಿರಬೇಕಾದರೆ ರೈತರಿಂದ ಓಟ್ಸ್ ಧಾನ್ಯವನ್ನು ಕದ್ದು ತಿನ್ನಬೇಕಾಗಿತ್ತು.

ಒಂದು ದಿನ ಅದು ಒಂದು ಹೊಲಕ್ಕೆ ಬಂದಿತು. ಅಲ್ಲಿ ಕಾಳೊಕ್ಕುವ ನೆಲದ ಬಳಿ ಮೊಲಗಳ ಒಂದು ಗುಂಪೇ ನೆರೆದಿತ್ತು. ಈ ಮೊಲಕ್ಕೆ ಇನ್ನೇನೂ ಮಾಡಲಿರಲಿಲ್ಲ. ಆ ಮೊಲಗಳ ಮುಂದೆಲ್ಲ ತನ್ನ ಬಗೆಗೇ ಜಂಭ ಕೊಚ್ಚಿಕೊಳ್ಳತೊಡಗಿತು.

"ನನ್ನಷ್ಟು ಉದ್ದವಾದ ಮೀಸೆ ಯಾರಿಗೂ ಇಲ್ಲ. ನನ್ನಷ್ಟು ದೊಡ್ಡದಾದ ಪಂಜ, ನನ್ನಷ್ಟು ಹರಿತವಾದ ಹಲ್ಲು ಯಾರಿಗೂ ಇಲ್ಲ. ನಾನು ಯಾರಿಗೂ ಹೆದರೊಲ್ಲ !"

ಆ ಮೊಲಗಳಿಗೆ ಇದರ ಜಂಭದ ಮಾತು ಕೇಳಿ ಬೇಸರವಾಯಿತು. ಅವು ಕಾಗಕ್ಕನಿಗೆ ದೂರು ಹೇಳಿದವು.

ಕಾಗಕ್ಕ ಈ ಮೊಲವನ್ನು ಹುಡುಕಿಕೊಂಡು ಹೋಯಿತು. ಅದು ಮರದ ಮೋಟೊಂದರ ಕೆಳಗೆ ಮಲಗಿತ್ತು.

ಕಾಗಕ್ಕನನ್ನ ಕಂಡ ಕೂಡಲೇ ಅದು ಗಾಬರಿಯಿಂದ ಎದ್ದು ಕುಳಿತಿತು.

“ಇಲ್ಲ, ಕಾಗಕ್ಕ. ನಾನು ಇನ್ನು ಮುಂದೆ ಎಂದೂ ಜಂಭ ಕೊಚ್ಚಲ್ಲ. ಖಂಡಿತವಾಗಿಯೂ !” ಎಂದು ಕೇಳಿಕೊಂಡಿತು.

“ಏನಂತ ನೀನು ಜಂಭ ಕೊಚ್ಚಿದ್ದು ?”

“ಏನಿಲ್ಲ. ನನ್ನಷ್ಟು ಉದ್ದ ಮೀಸೆ, ದೊಡ್ಡ ಪಂಜ, ಹರಿತವಾದ ಹಲ್ಲು ಯಾರಿಗೂ ಇಲ್ಲ ಅಂದೆ, ಅಷ್ಟೆ.”

ಕಾಗಕ್ಕ ಜಂಭಗಾರ ಮೊಲದ ಕಿವಿ ಹಿಡಿದು ಕುಕ್ಕಿತು, ಕುಲಕಾಡಿಸಿತು.

“ಇನ್ನು ಮುಂದೆ ಯಾವತ್ತೂ ಜಂಭ ಕೊಚ್ಚಬಾರದು; ತಿಳೀತಾ ?” ಅಂದಿತು ಅದು.

ಒಂದು ದಿನ ಕಾಗಕ್ಕ ಒಂದು ಬೇಲಿ ಮೇಲೆ ಕೂತಿತ್ತು. ಆಗ ಕೆಲವು ನಾಯಿಗಳು ಹಿಂದಿನಿಂದ ಓಡಿಬಂದು ಅದನ್ನು ಹಿಡಿದು ಕೆಳಕ್ಕೆ ಬೀಳಿಸಿದವು. ಅದನ್ನು ಕಾಡಿಸಿ ಪೀಡಿಸತೊಡಗಿದವು.

ಜಂಭಗಾರ ಮೊಲ ಇದನ್ನು ನೋಡಿತು. ಕಾಗಕ್ಕನ ಸ್ಥಿತಿಯನ್ನು ಕಂಡು ಅದಕ್ಕೆ ಕನಿಕರ ವಾಯ್ತು.

“ಪಾಪ, ಕಾಗಕ್ಕನಿಗೆ ಕಷ್ಟ ಬಂದಿದೆ. ನಾನು ಅವಳಿಗೆ ಸಹಾಯ ಮಾಡಬೇಕು” ಅಂದುಕೊಂಡು ಅದು ತಾನು ಅಡಗಿದ್ದ ಸ್ಥಳದಿಂದ ಒಂದು ದಿಣ್ಣೆಯ ಮೇಲಕ್ಕೆ ಎಗರಿ ನಿಂತಿತು.

ಮೊಲವನ್ನು ಕಂಡ ಕೂಡಲೇ ನಾಯಿಗಳು ಕಾಗೆಯನ್ನು ಬಿಟ್ಟು ಅದರ ಕಡೆಗೆ ಓಡಿದವು. ಕಾಗೆ ಹಾರಿಹೋಗಿ ಎತ್ತರದ ಬೇಲಿಯ ಮೇಲೆ ಕುಳಿತಿತು. ಮೊಲ ತುಂಬ ಜೋರಾಗಿ ಓಡಿತು. ನಾಯಿಗಳ ಕೈಗೆ ಸಿಗಲಿಲ್ಲ.

ಆಮೇಲೆ ಒಂದು ಸಾರಿ ಕಾಗಕ್ಕ ಜಂಭಗಾರ ಮೊಲವನ್ನು ಕಂಡಾಗ ಹೇಳಿತು:

“ನೀನು ಜಂಭಗಾರ ಮೊಲ ಅಲ್ಲವೇ ಅಲ್ಲ. ನೀನು ನಿಜಕ್ಕೂ ಧೈರ್ಯಶಾಲಿ ಮೊಲ. ನನ್ನ ಪ್ರಾಣವನ್ನೇ ಉಳಿಸಿದೆಯಲ್ಲ !”

ಕರಡಿ ಮತ್ತು ನರಿ

ಒಂದಾನೊಂದು ಕಾಲದಲ್ಲಿ ಒಂದು ನರಿ ಒಂದು ಕರಡಿ ಇದ್ದವು. ಕರಡಿಯ ಬಳಿ ಒಂದು ಪೀಪಾಯಿ ತುಂಬ ಜೇನುತುಪ್ಪ ಇತ್ತು. ಚಳಿಗಾಲದಲ್ಲಿ ಉಪಯೋಗಿಸೋಣ ಅಂತ ಅದು ಅದನ್ನು ಅಟ್ಟದ ಮೇಲೆ ಇರಿಸಿತ್ತು.

ನರಿಗೆ ಈ ವಿಷಯ ತಿಳಿಯಿತು. ಹೇಗಾದರೂ ಮಾಡಿ ಈ ಜೇನುತುಪ್ಪವನ್ನು ತಾನು ಹೊಡೀಬೇಕೂಂತ ಅದಕ್ಕೆ ಆಸೆಯಾಯಿತು. ಒಂದು ಉಪಾಯ ಹುಡುಕಿತು. ಕರಡಿಯ ಮನೆ ಕಿಟಕಿ ಬಳಿ ನಿಂತು ಹೇಳಿತು:

"ಕರಡಿರಾಯ, ಕರಡಿರಾಯ. ನಾನು ಕಷ್ಟದಲ್ಲಿದೇನೆ. ನನಗೆ ಸಹಾಯ ಮಾಡ್ತೀಯ?"

"ಏನು ಕಷ್ಟ, ನರಿಯಕ್ಕ?"

"ನನ್ನ ಮನೆ ಹಳೆಯದಾಗಿದೆ, ಮುರಿದು ಬೀಳ್ತಾ ಇದೆ. ಅದರಲ್ಲಿ ಬೆಚ್ಚಗೆ ಮಾಡಿ ಕೊಳ್ಳಲು ಬೆಂಕಿಯೂ ಇಲ್ಲ. ರಾತ್ರಿ ಹೊತ್ತು ನಿನ್ನ ಮನೇಲಿ ಮಲಗೋಕೆ ಅವಕಾಶ ಕೊಡ್ತೀಯ?"

"ಅದಕ್ಕೇನಂತೆ, ಬಾ" ಅಂದಿತು ಕರಡಿ ಕನಿಕರದಿಂದ.

ಅವೆರಡೂ ಬೆಂಕಿ ಮುಂದೆ ಬೆಚ್ಚಗೆ ಮಲಗಿದವು. ಆದರೆ ಕುತಂತ್ರಿ ನರಿಗೆ ನಿದ್ದೆಯೇ ಬಾರದು. ಅದಕ್ಕೆ ಜೇನುತುಪ್ಪದ್ದೇ ಯೋಚನೆ. ಅದು ಬಾಲವನ್ನು ಆಡಿಸುತ್ತಲೇ ಇತ್ತು. ಅದು ನೆಲದ ಮೇಲೆ ಮಾಡಿದ ಟಪ್-ಟಪ್-ಟಪ್ ಸದ್ದು ಕರಡಿಯನ್ನು ಎಚ್ಚರಗೊಳಿಸಿತು.

"ಯಾರದು ಬಾಗಿಲು ತಟ್ಟುತಿರೋದು, ನರಿಯಕ್ಕ?"

"ಯಾರೋ ನನಗಾಗಿ ಬಂದಿದಾರೆ. ಮಗು ಹುಟ್ಟಿದೆಯಂತೆ."

"ಹಾಗಾದರೆ ಹೋಗಿ ನೋಡಿಕೊಂಡು ಬಾ."

ನರಿ ಹೊರಗೆ ಹೋಯಿತು – ಹುಟ್ಟಿದ ಮಗುವನ್ನು ನೋಡಲೆಂದಲ್ಲ, ಆದರೆ ಹೊರಗಡೆ ಇದ್ದ ಏಣಿ ಹತ್ತಿ ಅಟ್ಟಕ್ಕೆ ಹೋಗಿ ಜೇನುತುಪ್ಪ ಕುಡಿಯಲು. ಸಾಕಷ್ಟು ಕುಡಿದ ಮೇಲೆ ಅದು ಮತ್ತೆ ಹೋಗಿ ಬೆಂಕಿ ಮುಂದೆ ಮಲಗಿತು.

"ನರಿಯಕ್ಕ, ನರಿಯಕ್ಕ. ಮಗೂಗೆ ಏನು ಹೆಸರಿಟ್ಟರು?" ಕರಡಿ ಕೇಳಿತು.

"ಮೊದಲಮ್ಮ ಅಂತ."

"ಚೆನ್ನಾದ ಹೆಸರು."

ಮಾರನೆಯ ರಾತ್ರಿಯೂ ಅವು ಬೆಂಕಿಯ ಮುಂದೆ ಮಲಗಿದವು. ನರಿ ಮತ್ತೆ ತನ್ನ ಬಾಲ ವನ್ನು ನೆಲದ ಮೇಲೆ ಟಪ್-ಟಪ್-ಟಪ್ ಅಂತ ಬಡಿಯಿತು.

"ಕರಡಿ, ಕರಡಿ, ಅವರು ನನ್ನ ಮತ್ತೆ ಕರೀತಿದಾರೆ. ಇನ್ನೊಂದು ಮಗು ಹುಟ್ಟಿದೆಯಂತೆ."

"ಹಾಗಾದರೆ ನೀನು ಹೋಗಿ ಬಾ, ನರಿಯಕ್ಕ."

ಈ ಸಾರಿ ನರಿ ಅರ್ಧ ಪೀಪಾಯಿ ಜೇನು ಕುಡಿದು ಮುಗಿಸಿತು. ಅದು ಮಲಗುವುದಕ್ಕೆ ಹಿಂದಿರುಗಿದಾಗ, ಮಗೂಗೆ ಏನು ಹೆಸರು ಇಟ್ಟರು ಅಂತ ಕರಡಿ ಕೇಳಿತು.

"ಅರ್ಧಮ್ಮ ಅಂತ."

"ಒಳ್ಳೆಯ ಹೆಸರು."

ಮೂರನೆಯ ರಾತ್ರಿಯೂ ನರಿ ನೆಲವನ್ನು ಟಪ್-ಟಪ್-ಟಪ್ ಅಂತ ಬಡಿಯಿತು.

"ಇನ್ನೊಂದು ಮಗು ಹುಟ್ಟಿದೆ. ಹೋಗಿ ನೋಡಬೇಕು."

"ಸರಿ. ಹೋಗಿ ಬಾ. ಬೇಗ ಬಾ. ನಾನು ಬೆಳಗಿನ ತಿಂಡಿಗೆ ದೋಸೆ ಮಾಡ್ತೀನಿ."

"ಬೇಗ ಬಂದು ಬಿಡ್ತೀನಿ."

ನರಿ ನೇರವಾಗಿ ಅಟ್ಟಕ್ಕೆ ಓಡಿತು. ಜೇನನ್ನೆಲ್ಲ ಕುಡಿದು ಮುಗಿಸಿತು. ಪೀಪಾಯಿಯ ತಳವನ್ನೂ ನೆಕ್ಕಿ ಚೊಕ್ಕಟ ಮಾಡಿತು.

ಹಿಂದಿರುಗಿದಾಗ ಕರಡಿ ಆಗಲೇ ಎದ್ದಿತ್ತು.

"ಏನು ನರಿಯಕ್ಕ. ಈ ಸಾರಿ ಮಗುವಿಗೆ ಏನು ಹೆಸರಿಟ್ಟರು?"

"ಚೊಕ್ಕಟಮ್ಮ ಅಂತ."

"ಆಹಾ, ತುಂಬ ಚೆನ್ನಾದ ಹೆಸರು. ಸರಿ, ಬಾ. ದೋಸೆ ಮಾಡೋಣ." ಕರಡಿ ದೋಸೆ ಎರೆಯುತ್ತಿತ್ತು. ಆಗ ನರಿ ಕೇಳಿತು:

"ದೋಸೆ ಏನೋ ಮಾಡ್ತೀಯ. ಆದರೆ ಜೇನುತುಪ್ಪ ಎಲ್ಲಿದೆ?"

"ಅಟ್ಟದ ಮೇಲೆ."

ಕರಡಿ ಅಟ್ಟ ಹತ್ತಿ ಹೋಗಿ ನೋಡಿತು. ಪೀಪಾಯಿ ಖಾಲಿ.

"ಯಾರು ಜೇನನ್ನೆಲ್ಲ ತಿಂದು ಹಾಕಿದ್ದು? ನೀನೇ ಇರಬೇಕು, ನರಿಯಕ್ಕ. ಬೇರೆ ಯಾರೂ ಬಂದಿಲ್ಲ."

"ಅಯ್ಯೋ, ಏನು ಹಾಗಂತೀ. ನಾನು ನಿನ್ನ ಜೇನನ್ನೇ ನೋಡಿಲ್ಲ. ನೀನೇ ತಿಂದುಬಿಟ್ಟು ನನ್ನ ಮೇಲೆ ತಪ್ಪು ಹೊರಿಸ್ತಾ ಇದೀಯ!" ನರಿ ಹೇಳಿತು.

ಕರಡಿಗೆ ತಬ್ಬಿಬ್ಬಾಯಿತು. ಅದು ಯೋಚನೆ ಮಾಡೀ ಮಾಡೀ ಮಾಡಿತು... ಕೊನೆಗೆ ಹೇಳಿತು:

"ಈಗ ಯಾರು ತಿಂದರೂಂತ ಹೇಗೆ ತಿಳಿಯೋದು ಅನ್ನೋದು ನನಗೆ ಹೊಳೀತು. ನಾವಿಬ್ಬರೂ ಅಂಗತ್ತನಾಗಿ ಬಿಸಿಲಿನಲ್ಲಿ ಮಲಗಿಕೊಳ್ಳೋಣ. ನಮ್ಮಲ್ಲಿ ಯಾರು ಜೇನು ತಿಂದಿದ್ದರೂ ಬಿಸಿಲಿನಲ್ಲಿ ಕರಗುತ್ತೆ. ಚರ್ಮದ ಮೂಲಕ ಹೊರಕ್ಕೆ ಒಸರುತ್ತೆ."

ಅವೆರಡೂ ಬಿಸಿಲಿನಲ್ಲಿ ಮಲಗಿದವು. ಕರಡಿಗೆ ಬೇಗನೆಯೇ ನಿದ್ದೆ ಬಂದು ಬಿಟ್ಟಿತು. ಆದರೆ ಕುತಂತ್ರಿ ನರಿಗೆ ಮಾತ್ರ ಹೆದರಿಕೆಯಿಂದ ನಿದ್ದೆ ಬರಲಿಲ್ಲ. ಅದು ಸದಾ ಕಾಲವೂ ತನ್ನ ಮೈ ಕೈ ನೋಡಿಕೊಳ್ಳುತ್ತಲೇ ಇತ್ತು. ಕೊನೆಗೆ ಜೇನುತುಪ್ಪದ ಹನಿ ಅದರ ಹೊಟ್ಟೆಯ ಚರ್ಮದಿಂದ ಒಸರಿಕೊಂಡು ಹೊರಬಂದುದನ್ನು ಅದು ಕಂಡಿತು. ಅದು ಬೇಗ ಅದನ್ನು ಒರಸಿ ಆ ಜೇನಿನ ಹನಿಗಳನ್ನು ಕರಡಿಯ ಹೊಟ್ಟೆಗೆ ಸವರಿತು.

"ಹೇಯ್, ಕರಡಿರಾಯ. ಏಳು, ಏಳು! ನೋಡು ಯಾರು ಜೇನು ತಿಂದಿದಾರೆ ಅಂತ!"

ಕರಡಿ ಒಪ್ಪಿಕೊಳ್ಳಲೇ ಬೇಕಾಯಿತು. ಪಾಪ, ಅದಕ್ಕೆ ಇನ್ನೇನು ಮಾಡಲು ಸಾಧ್ಯವಿತ್ತು!

ಬೂದು ಬೆಕ್ಕು, ಹೋತ ಮತ್ತು ಟಗರು

ಒಂದೂರಿನಲ್ಲಿ ಒಂದು ಹೊಲಮನೆಯ ಅಂಗಳದಲ್ಲಿ ಒಂದು ಹೋತ ಒಂದು ಟಗರು ಒಟ್ಟಿಗೇ ವಾಸಿಸುತ್ತಿದ್ದವು. ಅವೆರಡಕ್ಕೂ ಮಧ್ಯೆ ಗಾಢ ಸ್ನೇಹ. ಎರಡೂ ಎಲ್ಲವನ್ನೂ, ಒಂದು ಹುಲ್ಲುಗರಿಕೆಯನ್ನಾದರೂ ಸರಿ, ತಮ್ಮ ಮಧ್ಯೆ ಹಂಚಿಕೊಳ್ಳುತ್ತಿದ್ದವು.

ಒಂದು ದಿನ ಟಗರೂ ಹೋತವೂ ಅಂಗಳದಲ್ಲಿ ಮೈಚಾಚಿ ಮಲಗಿ ಅದೂ ಇದೂ ಮಾತಾಡುತ್ತಿದ್ದವು. ಆಗ ಇದ್ದಕ್ಕಿದ್ದಂತೆ, ಆಕಾಶದಿಂದ ಬಂದಿಳಿಯಿತೇನೋ ಅನ್ನುವಂತೆ, ಬೂದು ಬೆಕ್ಕು ಕಾಣಿಸಿಕೊಂಡಿತು. ಅದು ನೇರವಾಗಿ ಅವುಗಳ ಬಳಿಗೇ ಬಂತು. ಅದರ ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿಯುತ್ತಿತ್ತು. "ಯಾಕೆ ಅಳ್ತಾ ಇದೀಯ, ಬೂದು ಬೆಕ್ಕೆ? ಕುಂಟುತಾನೂ ಇದೀಯ" ಅಂತ ಕೇಳಿದವು ಹೋತವೂ ಟಗರೂ.

"ಅಳದೆ ಏನು ಮಾಡಲಿ ಹೇಳಿ! ಯಜಮಾನಿ ನನ್ನ ಚೆನ್ನಾಗಿ ಬಯ್ದಳು, ಹೊಡೆದಳು, ಕಿವಿ ಹಿಂಡಿದಳು, ನನ್ನ ಕಣ್ಣೀರಿನಲ್ಲೇ ನನ್ನ ಮುಳುಗಿಸ್ತೀನಿ ಅಂತ ಹೇಳಿದಳು."

"ಅವಳು ಹಾಗೆ ಹೇಳೋಕೆ ನೀನು ಏನು ಮಾಡಿದೆ?"

"ಅಂಥದೇನೂ ಇಲ್ಲ. ಹಾಲಿನ ಕೆನೇನ ತಿಂದೆ, ಅಷ್ಟೆ!"

ಹಾಗೆಂದು ಬೆಕ್ಕು ಮತ್ತೆ ಗೊಳೋ ಅಂತ ಅಳೋಕೆ ಶುರುಮಾಡಿತು.

"ಮತ್ತೆ ಯಾಕೆ ಅಳ್ತಿದೀಯ?" ಮಿತ್ರರು ಕೇಳಿದರು.

"ಅಳದೆ ಏನು ಮಾಡಲಿ ಹೇಳಿ! ಯಜಮಾನಿ ನನ್ನ ಹೊಡೀತಾ ಹೇಳಿದಳು: 'ಇವತ್ತು ನಮ್ಮ ಮನೆ ಅಳಿಯ ಊಟಕ್ಕೆ ಬರ್ತಾರೆ. ಅವರಿಗೆ ಹಾಕೋಕೆ ಹಾಲಿನ ಕೆನೆಯೇ ಇಲ್ಲ. ಈಗ ಇನ್ನೇನೂ ಮಾಡೋ ಹಾಗಿಲ್ಲ. ಹೋತ ಟಗರು ಕೊಂದು ಅದನ್ನೇ ಅವರಿಗೆ ಬಡಿಸಬೇಕಷ್ಟೆ!'"

ಹೋತಕ್ಕೂ ಟಗರಿಗೂ ಕೋಪ ಉಕ್ಕೇರಿ ಬಂತು.



"ಶನಿ ಬೂದು ಬೆಕ್ಕೇ! ನಮ್ಮನ್ನು ಕಷ್ಟದಲ್ಲಿ ಸಿಕ್ಕಿಬೀಳಿಸಿದೆಯಾ! ನಿನ್ನ ಈಗಲೇ ತಿವಿದು ಸಾಯಿಸ್ತೇವೆ. ಹೌದು, ನಿನಗೆ ತಕ್ಕ ಶಾಸ್ತಿ ಮಾಡಲೇ ಬೇಕು!"

ಆದರೆ ಬೂದು ಬೆಕ್ಕು ತಾನು ಮಾಡಿದ್ದು ತಪ್ಪು, ತನ್ನನ್ನು ಕ್ಷಮಿಸಬೇಕು ಅಂತ ತುಂಬ ಕೇಳಿಕೊಂಡ ಮೇಲೆ ಹೋತವೂ ಟಗರೂ ಅದನ್ನು ಕ್ಷಮಿಸಿದವು. ಈಗ ಮೂವರೂ ಒಟ್ಟಿಗೆ ಕುಳಿತು ಏನು ಮಾಡಬೇಕೂಂತ ಯೋಚಿಸತೊಡಗಿದವು.

"ಟಗರಣ್ಣ, ನಿನ್ನ ತಲೆ ಎಷ್ಟು ಬಲವಾಗಿದೆ ಅಂತ ತೋರಿಸು ನೋಡೋಣ" ಅಂತ ಬೆಕ್ಕು ಕೇಳಿತು. "ಈ ಗೇಟನ್ನು ಗುದ್ದಿ ಒಡೆದು ತೆಗೆಯೋಕೆ ನಿನ್ನ ಕೈಲಿ ಆಗುತ್ತ ಅಂತ ನೋಡು." ಟಗರು ಎದ್ದು ನಿಂತಿತು. ಗೇಟಿನ ಕಡೆಗೆ ಓಡಿ ಹೋಗಿ ಅದನ್ನು ತನ್ನ ತಲೆಯಿಂದ ಬಲವಾಗಿ ಗುಮ್ಮಿತು. ಗೇಟು ತೆರೆಯಲಿಲ್ಲ, ಆದರೆ ಕಿರುಗುಟ್ಟಿತಷ್ಟೆ.

"ಹೋತಣ್ಣ, ಈಗ ನೀನು ತೋರಿಸು, ನಿನ್ನ ತಲೆ ಎಷ್ಟು ಗಟ್ಟಿಯಾಗಿದೆ ಅಂತ" ಬೂದು ಬೆಕ್ಕು ಹೋತನ ಕಡೆಗೆ ತಿರುಗಿ ಹೇಳಿತು. ಹೋತ ಎದ್ದು ನಿಂತಿತು. ಗೇಟಿನ ಕಡೆಗೆ ಓಡಿ ಹೋಗಿ ಡಿಕ್ಕಿ ಹೊಡೆಯಿತು – ದಿಢೀರನೆ ಗೇಟು ತೆರೆದುಕೊಂಡಿತು.

ಟಗರೂ ಹೋತವೂ ಹೊರಕ್ಕೆ ಓಡಿದವು. ಬೂದು ಬೆಕ್ಕೂ ಅವುಗಳ ಹಿಂದೆ ತನ್ನ ಮೂರು ಕಾಲುಗಳಲ್ಲೇ ಕುಂಟಿಕೊಂಡು ಓಡಿತು. ಅವು ಎಷ್ಟು ಜೋರಾಗಿ ಓಡಿಹೋದ ವೆಂದರೆ ಆ ರಭಸಕ್ಕೆ ಎತ್ತರಕ್ಕೆ ಬೆಳೆದು ನಿಂತಿದ್ದ ಹುಲ್ಲೂ ನೆಲಮಟ್ಟಕ್ಕೆ ಬಾಗಿತು, ಸುತ್ತಲೂ ಭಾರಿ ಧೂಳಿನ ಮೋಡಗಳು ಎದ್ದವು. ಬೂದು ಬೆಕ್ಕು ಬೇಗನೆಯೇ ಬಳಲಿತು.

"ನಾನು ನಿಮ್ಮ ಸರಿಸಮ ಓಡಲಾರೆ" ಅದು ಹೋತಕ್ಕೂ ಟಗರಿಗೂ ಹೇಳಿತು. "ನನ್ನ ಮೇಲೆ ಕರುಣೆ ಇಡಿ."

ಹೋತವು ಬೂದು ಬೆಕ್ಕನ್ನು ತನ್ನ ಬೆನ್ನ ಮೇಲೆ ಕೂರಿಸಿಕೊಂಡಿತು. ಮೂರೂ ಮತ್ತೆ ಓಡಿದವು. ಕಾಡುಮೇಡು, ಹೊಲಗದ್ದೆಗಳ ಮೂಲಕ, ಮರಳುಗಾಡುಗಳನ್ನು ಹಾದು, ಎತ್ತರವಾದ ಪರ್ವತ, ಆಳವಾದ ಕಣಿವೆಗಳನ್ನು ದಾಟಿಕೊಂಡು ಅವು ಓಡಿ ಹೋದವು.

ಅವು ಹಗಲೂ ರಾತ್ರಿ ಓಡಿದವು. ಒಂದು ಘಳಿಗೆಯೂ ನಿಲ್ಲಲಿಲ್ಲ. ಕೊನೆಗೆ ಅವು ಒಂದು ಗುಡ್ಡದ ಬಳಿ ಬಂದವು. ಅದು ಹಚ್ಚ ಹಸುರಿನಿಂದ ಕೂಡಿತ್ತು. ಅದರ ಕೆಳಗಡೆ ಆಳವಾದ ಕೊರಕಲಿತ್ತು. ಅಲ್ಲೊಂದು ಮೈದಾನವಿತ್ತು. ಅದರಲ್ಲಿ ಒಂದು ನೂರು ಹುಲ್ಲಿನ ಮೆದೆಗಳಿ ದ್ದವು. ಒಂದೊಂದೂ ಒಂದು ದೊಡ್ಡ ಪಟ್ಟಣದಷ್ಟು ದೊಡ್ಡದು. ಟಗರೂ ಹೋತವೂ ಬೂದು ಬೆಕ್ಕೂ ಅಲ್ಲಿ ಸ್ವಲ್ಪ ವಿಶ್ರಾಂತಿ ಪಡೆದುಕೊಳ್ಳಲು ನಿಂತವು. ಆಗ ಅಲ್ಲಿ ಶರತ್ಕಾಲವಾಗಿತ್ತು. ರಾತ್ರಿ ತುಂಬ ಚಳಿಯಾಗಿತ್ತು. ಬೆಚ್ಚಗೆ ಮಾಡಿಕೊಳ್ಳಲು ಬೆಂಕಿ ಹೊತ್ತಿಸುವುದು ಹೇಗೆ?

ಹೋತವೂ ಟಗರೂ ಏನು ಮಾಡಬೇಕೂಂತ ಯೋಚಿಸತೊಡಗಿದವು. ಆದರೆ



ಅವು ಯಾವುದೇ ತೀರ್ಮಾನಕ್ಕೆ ಬರುವ ಮುನ್ನವೇ ಬೂದು ಬೆಕ್ಕು ತನ್ನ ಪಂಜಗಳಲ್ಲಿ ಒಂದು ಚೂರು ಬರ್ಚ್ ಮರದ ತೊಗಟೆಯನ್ನು ಹಿಡಿದುಕೊಂಡು ಬಂದಿತು. ಅದು ಅದನ್ನು ಹೋತದ ಕೋಡಿನ ಸುತ್ತ ಸುತ್ತಿ, ಹೋತಕ್ಕೂ ಟಗರಿಗೂ ಜೋರಾಗಿ ಡಿಕ್ಕಿ ಹೊಡೆಯುವಂತೆ ಹೇಳಿತು.

ಅವು ಹಾಗೆಯೇ ಮಾಡಿದವು. ಅವು ಎಷ್ಟು ಜೋರಾಗಿ ಡಿಕ್ಕಿ ಹೊಡೆದವೆಂದರೆ ಅವುಗಳ ಕಣ್ಣುಗಳಿಂದ ಕಿಡಿಗಳು ಹೊರಸೂಸಿದವು. ಆ ಕಿಡಿಗಳಿಂದ ಮರದ ತೊಗಟೆ ಹೊತ್ತಿಕೊಂಡು ಉರಿಯತೊಡಗಿತು. ಅವು ಅದರಿಂದ ದೊಡ್ಡ ಬೆಂಕಿ ಮಾಡಿ ಅದರ ಸುತ್ತ ಕುಳಿತು ತಮ್ಮನ್ನು ಬೆಚ್ಚಗೆ ಮಾಡಿಕೊಂಡವು.

ಅವು ಇನ್ನೇನು ಆಯಾಸ ಕಳೆದುಕೊಂಡು ಉಲ್ಲಾಸಗೊಳ್ಳತೊಡಗಿದ್ದವು, ಅಷ್ಟು ಹೊತ್ತಿಗೆ ಸರಿಯಾಗಿ, ಅಗೋ ನೋಡಿ – ಒಂದು ಕರಡಿ ಅವುಗಳ ಕಡೆಗೇ ದಾಪುಗಾಲು ಹಾಕಿಕೊಂಡು ಬಂದಿತು. ಅದನ್ನು ಯಾರೂ ಕರೆದೂ ಇರಲಿಲ್ಲ ಏನೂ ಇಲ್ಲ.

"ನನಗೂ ಸ್ವಲ್ಪ ವಿಶ್ರಾಂತಿ ತಗೊಂಡು ಮೈ ಬೆಚ್ಚಗೆ ಮಾಡಿಕೊಳ್ಳೋಕೆ ಅವಕಾಶ ಕೊಡುತೀರ" ಅದು ಕೇಳಿಕೊಂಡಿತು. "ನಾನು ತುಂಬ ಬಳಲಿದೀನಿ, ನಿಶ್ಯಕ್ತನಾಗಿದೀನಿ."

"ಸರಿ, ಬಾ. ಆದರೆ ಹೇಳು ನೀನು ಎಲ್ಲಿಗೆ ಹೋಗಿದ್ದೆ?"

"ನಾನೊಂದು ಜೇನುಹುಳುಗಳ ತೋಟಕ್ಕೆ ಹೋಗಿದ್ದೆ. ಮಾಲೀಕರ ಜೊತೆ ಹೋರಾಡಿ ಬಂದೆ." ಈಗ ಅಲ್ಲಿದ್ದುದೆಲ್ಲ ಈ ನಾಲ್ಕು ಪ್ರಾಣಿಗಳು ಮತ್ತು ಕಗ್ಗತ್ತಲು. ಅವು ಮಲಗಲು ಅಣಿಯಾದವು – ಕರಡಿ ಹುಲ್ಲಿನ ಮೆದೆಯ ಕೆಳಗೆ, ಬೂದು ಬೆಕ್ಕು ಮೆದೆಯ ಮೇಲೆ, ಹೋತ ಟಗರು ಬೆಂಕಿಯ ಪಕ್ಕದಲ್ಲಿ. ಆಗ ಇದ್ದಕ್ಕಿದ್ದಂತೆ ಯಾರು ಅಲ್ಲಿಗೆ ಬಂದರು ಗೊತ್ತೆ – ಏಳು ಬೂದು ತೋಳಗಳು ಒಂದು ಬಿಳಿತೋಳ. ಅವು ನೇರವಾಗಿ ಹುಲ್ಲಿನ ಮೆದೆಯ ಬಳಿಗೇ ಬಂದವು!

ಹೋತವೂ ಟಗರೂ ಹೆದರಿ ಅರುಚತೊಡಗಿದವು. ಆದರೆ ಬೂದು ಬೆಕ್ಕು ಒಂದು ಹಂಚಿಕೆ ಹೂಡಿತು. ಅದು ಬಿಳಿ ತೋಳಕ್ಕೆ ಹೇಳಿತು:

"ನನ್ನ ಮಾತು ಕೇಳು, ಬಿಳಿ ತೋಳ, ತೋಳಗಳ ರಾಜಕುಮಾರ! ನಮ್ಮ ಅಣ್ಣ ಹೋತದ ಕೋಪವನ್ನು ಮಾತ್ರ ಕೆರಳಿಸದಂತೆ ಎಚ್ಚರದಿಂದಿರು. ಅವನಿಗೆ ಕೋಪ ಜಾಸ್ತಿ. ಒಮ್ಮೆ ಕೆರಳಿದನೆಂದರೆ ಯಾರನ್ನೂ ಬಿಡೊಲ್ಲ. ಅವನ ಬಲ ಇರೋದು ಅವನ ಗಡ್ಡದಲ್ಲೇ. ಅದರ ಸಹಾಯದಿಂದ ಅವನು ಎಲ್ಲ ಪ್ರಾಣಿಗಳನ್ನೂ ಸೋಲಿಸುತ್ತಾನೆ. ಅವು ಜೀವಂತವಾಗಿರುವಾಗಲೇ ತನ್ನ ಕೊಂಬುಗಳಿಂದ ಅವುಗಳ ಚರ್ಮ ಸುಲೀತಾನೆ. ಅವನ ಬಳಿಗೆ ಮಾತ್ರ ಮೆಲ್ಲಗೆ ಹೋಗಿ ಬೇಕಾದರೆ ಹೇಳಿಕೊ ನಮ್ಮ ತಮ್ಮನ ಜೊತೆ ಸೆಣಸಾಡಲು ನಿಮಗೆ ಇಷ್ಟ ಅಂತ. ಅವನೆಲ್ಲಿದಾನೆ ಗೊತ್ತ? ಅಲ್ಲಿ ನೋಡು, ಆ ಹುಲ್ಲಿನ ಮೆದೆಯ ಕೆಳಗೆ."

ತೋಳಗಳಿಗೆ ಬೆಕ್ಕಿನ ಮಾತು ಸರಿ ಎಂದು ತೋರಿತು. ಅವು ಕರಡಿ ಮಲಗಿದ್ದ ಸ್ಥಳಕ್ಕೆ ಹೋಗಿ ಅದರ ಮೇಲೆ ನಿಂತುಕೊಂಡವು. ಅದನ್ನು ಪೀಡಿಸಲು ಕಾಡಿಸಲು ಮೊದಲಿಟ್ಟವು.

ಕರಡಿ ಸ್ವಲ್ಪ ಕಾಲ ಸಹಿಸಿಕೊಂಡಿತ್ತು. ಆದರೆ ಕೊನೆಗೆ ಕೋಪ ಬಂತು. ಆ ತೋಳಗಳನ್ನೆಲ್ಲ ಒಂದೇ ಏಟಿಗೆ ತನ್ನ ಪಂಜಗಳಲ್ಲಿ ಹಿಡಿಯಿತು. ತೋಳಗಳಿಗೆ ದಿಗಿಲಾಯಿತು. ಹೇಗೋ ಅದರ ಹಿಡಿತದಿಂದ ಬಿಡಿಸಿಕೊಂಡು ಓಟಕಿತ್ತವು. ಈ ಮಧ್ಯೆ ಹೋತವೂ ಟಗರೂ ಬೂದು ಬೆಕ್ಕನ್ನು ತಮ್ಮ ಮಧ್ಯೆ ಕೂರಿಸಿಕೊಂಡು ಕಾಡಿಗೆ ಓಡಿದವು. ಆದರೆ ಕಾಡು ತಲುಪಿದವೋ ಇಲ್ಲವೋ, ಅಲ್ಲಿ ಅವಕ್ಕೆ ಮತ್ತೆ ಅದೇ ತೋಳಗಳು ಎದುರಾದವು. ಬೂದು ಬೆಕ್ಕು ಬೇಗಬೇಗ ಒಂದು ಫರ್ ಮರದ ಮೇಲಕ್ಕೆ ಹತ್ತಿಹೋಯಿತು. ಹೋತವೂ ಟಗರೂ ತಮ್ಮ ಮುಂಗಾಲುಗಳಿಂದ ಆ ಮರದ ಕೊಂಬೆ ಹಿಡಿದುಕೊಂಡು ಮೇಲೆ ತೂಗಿ ನಿಂತವು. ತೋಳಗಳು ಮರದ ಕೆಳಗೇ ನಿಂತುಕೊಂಡು ತಮ್ಮ ಹಲ್ಲು ಮಸೆಯುತ್ತಾ ಇದ್ದವು.

ಪರಿಸ್ಥಿತಿ ಕೆಟ್ಟುದಾಗಿದೆ ಎಂದು ಕಂಡುಕೊಂಡ ಬೂದು ಬೆಕ್ಕು ತೋಳಗಳ ಮೇಲೆ ಫರ್ ಮರದ ಕಾಯಿಗಳ ಸುರಿಮಳೆ ಸುರಿಸಿತು. ಅದೇ ಹೊತ್ತಿನಲ್ಲಿ ತೋಳಗಳಿಗೆ ಕೇಳಿಸುವಂತೆ ಗಟ್ಟಿಯಾಗಿ ಹೇಳಿತು: "ಒಂದು, ಎರಡು, ಮೂರು... ಒಟ್ಟು ಮೂರೇ ತೋಳಗಳು. ಅಂದರೆ ನಮಗೆ ಒಬ್ಬೊಬ್ಬರಿಗೂ ಒಂದೊಂದು ಸಿಗುತ್ತಷ್ಟೆ. ನಾನೇನೋ ಮೊನ್ನೆ ಊಟಕ್ಕೆ ಎರಡು ತೋಳ ಹಿಡಿದಿದ್ದೆ. ಅವುಗಳ ಮೂಳೆಗಳನ್ನೂ ಸೇರಿಸಿ ಪೂರ್ತಿ ತಿಂದು ಮುಗಿಸಿದೆ. ಈಗಲೂ ನನ್ನ ಹೊಟ್ಟೆ ಭರ್ತಿಯಾಗಿದೆ. ಆದರೆ, ಅಣ್ಣ, ನೀನು ತುಂಬ ಹಸಿದಿರಬೇಕು, ಅಲ್ಲವೇ. ಹೋಗಲಿ, ನನ್ನ ತೋಳಾನೂ ನೀನೇ ತಿನ್ನು. ಪಾಪ, ನೀನು ಕರಡಿಯ ಶಿಕಾರಿಗೆ ಹೋಗಿ ಬರಿ ಕೈಲಿ ಬಂದೆ ಅಂತ ನನಗೆ ಗೊತ್ತು."

ಹೀಗೆ ಅದು ಹೇಳಿ ಮುಗಿಸಿತ್ತಷ್ಟೆ, ಅದೇ ಹೊತ್ತಿಗೆ ಹೋತಕ್ಕೆ ತೂಗಿ ನಿಂತು ಸಾಕಾಗಿತ್ತು. ಅದು ಕೊಂಬೆ ಹಿಡಿದುದನ್ನು ಬಿಟ್ಟು ಬಿಟ್ಟಿತು, ಕೆಳಗೆ ಧೊಪ್ಪೆಂದು ಬಿದ್ದಿತು. ಕೊಂಬುಗಳನ್ನು ಮುಂದು ಮಾಡಿಕೊಂಡು ನೇರವಾಗಿ ತೋಳವೊಂದರ ಮೇಲೆಯೇ ಬಿದ್ದಿತು.

"ತಡಿ ಅವನ್ನ ! ಹಿಡಿ ಅವನ್ನ !" ಬೂದು ಬೆಕ್ಕು ಗಟ್ಟಿಯಾಗಿ ಕೂಗಿ, ಹೇಳಿತು. ತೋಳಗಳಿಗೆ ತುಂಬ ಭಯವಾಯಿತು. ತಕ್ಷಣವೇ ಅಲ್ಲಿಂದ ಕಂಬಿ ಕಿತ್ತವು. ಒಮ್ಮೆಯೂ ಹಿಂದಿರುಗಿ ನೋಡಲಿಲ್ಲ. ಬೇಗನೆಯೇ ಅವು ಕಣ್ಮರೆಯಾದವು. ಬೂದು ಬೆಕ್ಕೂ ಅದರ ಇಬ್ಬರು ಮಿತ್ರರೂ ಶಾಂತಿಯಿಂದ ತಮ್ಮ ದಾರಿ ಹಿಡಿದು ಹೋದವು.

ಪುಟ್ಟ ಹುಡುಗಿ ಹಾಗೂ ಬಾತುಕೋಳಿಗಳು

ಒಂದಾನೊಂದು ಕಾಲದಲ್ಲಿ ಒಬ್ಬ ರೈತ, ಅವನ ಹೆಂಡತಿ ಇದ್ದರು. ಅವರಿಗೆ ಇಬ್ಬರು ಮಕ್ಕಳು – ಒಬ್ಬ ಪುಟ್ಟ ಹುಡುಗಿ, ಒಬ್ಬ ಪುಟ್ಟ ಹುಡುಗ.

ಒಂದು ದಿನ ಅಪ್ಪ ಅಮ್ಮ ಹೊರಗೆ ಹೋದರು. ಹೋಗೋಕೆ ಮುಂಚೆ ಅಮ್ಮ ಮಗಳನ್ನು ಕರೆದು ಹೇಳಿದಳು: "ಮಗಳೇ, ನಾವು ಹೊರಗೆ ಕೆಲಸಕ್ಕೆ ಹೋಗ್ತಾ ಇದೀವಿ. ನೀನೇ ನಿನ್ನ ತಮ್ಮನನ್ನು ಚೆನ್ನಾಗಿ ನೋಡಿಕೋಬೇಕು. ನೀನು ಒಳ್ಳೆಯ ಹುಡುಗಿಯಾಗಿದ್ದು ಹೊರಗೆ ಹೋಗದೇ ಇದ್ದರೆ, ನಾವು ಬರುವಾಗ ನಿನಗೆ ಒಂದು ಹೊಸ ಕರ್ಚೀಫ್ ತಂದು ಕೊಡ್ತೇವೆ."

ಅಪ್ಪ ಅಮ್ಮ ಹೋದರು. ಪುಟ್ಟ ಹುಡುಗಿ ಅಮ್ಮ ಹೇಳಿದ್ದನ್ನೆಲ್ಲ ಮರೆತಳು. ತಮ್ಮನನ್ನು ಕಿಟಕಿ ಬಳಿ ಹುಲ್ಲಿನ ಮೇಲೆ ಕೂರಿಸಿ ತನ್ನ ಗೆಳತಿಯರ ಜೊತೆ ಆಟ ಆಡಲು ಹೊರಟು ಹೋದಳು.

ಆಗ ಇದ್ದಕ್ಕಿದ್ದಂತೆ ಬಾತುಕೋಳಿಗಳ ಒಂದು ತಂಡ ಕೆಳಕ್ಕೆ ಇಳಿದು ಬಂದು ಪುಟ್ಟ ಹುಡುಗನನ್ನು ತಮ್ಮ ರೆಕ್ಕೆಗಳ ಮೇಲೆ ಕೂರಿಸಿಕೊಂಡು ಎತ್ತಿಕೊಂಡು ಹೋದವು.

ಆಟ ಮುಗಿದ ಮೇಲೆ ಪುಟ್ಟ ಹುಡುಗಿ ಮನೆಗೆ ಬಂದು ನೋಡ್ತಾಳೆ – ತಮ್ಮ ಇಲ್ಲವೇ ಇಲ್ಲ. ಅವಳಿಗೆ ಭಯದಿಂದ ಉಸಿರು ಕಟ್ಟಿದಂತಾಯಿತು. ಅಲ್ಲಿ ಇಲ್ಲಿ ಓಡಿ ಹೋಗಿ ನೋಡಿದಳು. ತಮ್ಮನ ಕುರುಹೂ ಕಾಣಲಿಲ್ಲ.

ಅವನ ಹೆಸರು ಹಿಡಿದು ಕೂಗಿದಳು, ಬಿಕ್ಕಳಿಸಿ ಅತ್ತಳು. ಅಪ್ಪ ಅಮ್ಮ ಬಂದರೆ ಬಯ್ತಾರೆ, ಬೇಗ ಬಾ ಅಂತ ಕೂಗಿ ಕರೆದಳು. ಆದರೆ ಹುಡುಗನಿಂದ ಉತ್ತರವೇ ಇಲ್ಲ.

ಹೊರಗೆ ಮೈದಾನಕ್ಕೆ ಓಡಿ ಹೋದಳು. ಕಪ್ಪು ಕಾಡಿನ ಆಚೆ ದೂರದಲ್ಲಿ ಬಾತುಕೋಳಿಗಳು ಹಾರಿಹೋಗುತ್ತಿರುವುದು ಬಿಟ್ಟು ಅವಳಿಗೆ ಬೇರೇನೂ ಕಾಣಲಿಲ್ಲ. ಥಟ್ಟನೆ ಅವಳಿಗೆ ಹೊಳೆಯಿತು, ಅವೇ ತನ್ನ ತಮ್ಮನನ್ನು ಒಯ್ದಿವೆ ಅಂತ. ಬಾತುಕೋಳಿಗಳು ನೀಚ ಪಕ್ಷಿಗಳು, ಅವು ಎಳೆ ಮಕ್ಕಳನ್ನು ಎತ್ತಿಕೊಂಡು ಹೋಗುತ್ತವೆ, ಅಂತ ಜನ ಹೇಳುತ್ತಿದ್ದದು ಅವಳಿಗೆ ನೆನಪಿಗೆ ಬಂತು.

ಪುಟ್ಟ ಹುಡುಗಿ ಆ ಬಾತುಕೋಳಿಗಳನ್ನು ಹುಡುಕಿಕೊಂಡು ಹೊರಟಳು. ಓಡಿ, ಓಡಿ ಸುಸ್ತಾದಳು. ಕೊನೆಗೆ ದಾರಿಯಲ್ಲಿ ಅವಳಿಗೆ ಒಂದು ಒಲೆ ಸಿಕ್ಕಿತು. ಅವಳು ಅದನ್ನು ಕೇಳಿದಳು:

"ಒಲೆಯೇ, ಒಲೆಯೇ, ಬಾತುಕೋಳಿಗಳು ಯಾವ ಕಡೆ ಹಾರಿ ಹೋದವು, ನಿನಗೆ ಗೊತ್ತೆ?"

"ನಾನು ಬೇಯಿಸಿದ ಒಂದು ರೈ ರೊಟ್ಟಿ ತಿನ್ನು, ನಾನು ಹೇಳ್ತೀನಿ."



"ಏನು ರೈ ರೊಟ್ಟಿ ತಿನ್ನಬೇಕೆ? ನಮ್ಮ ಮನೇಲಿ ನಾವು ಗೋಧಿ ರೊಟ್ಟೀನೂ ತಿನ್ನೊಲ್ಲ!"

ಒಲೆ ಅವಳಿಗೆ ಏನೂ ಹೇಳಲಿಲ್ಲ. ಅವಳು ಇನ್ನಷ್ಟು ದೂರ ಓಡಿದಳು. ಅಲ್ಲೊಂದು ಕಾಡಿನ ಸೇಬು ಮರ ಇತ್ತು.

"ಸೇಬುಮರ, ಸೇಬುಮರ, ಬಾತುಕೋಳಿಗಳು ಯಾವ ಕಡೆ ಹಾರಿ ಹೋದವು, ನಿನಗೆ ಗೊತ್ತೆ?" ಅವಳು ಕೇಳಿದಳು.

"ನನ್ನ ಕಾಡುಸೇಬು ಒಂದನ್ನು ತಿನ್ನು, ನಾನು ಹೇಳ್ತೀನಿ."

"ನಮ್ಮ ಮನೇಲಿ ನಾವು ತೋಟದ ಸೇಬನ್ನೂ ತಿನ್ನೊಲ್ಲ!"

ಸೇಬುಮರ ಅವಳಿಗೆ ಏನೂ ಹೇಳಲಿಲ್ಲ. ಪುಟ್ಟ ಹುಡುಗಿ ಇನ್ನೂ ಮುಂದೆ ಹೋದಳು. ಅಲ್ಲವಳಿಗೆ ಒಂದು ಹೊಳೆ ಸಿಕ್ಕಿತು. ಅದರಲ್ಲಿ ಹಾಲು ಹರೀತಿತ್ತು. ಅದಕ್ಕೆ ಹಣ್ಣಿನ ಪಾಕದ ದಡಗಳಿದ್ದವು.

"ಹಾಲಿನ ಹೊಳೆ, ಹಾಲಿನ ಹೊಳೆ, ಬಾತುಕೋಳಿಗಳು ಯಾವ ಕಡೆ ಹಾರಿ ಹೋದವು, ನಿನಗೆ ಗೊತ್ತೆ?" ಅಂತ ಕೇಳಿದಳು.

"ನನ್ನ ಹಣ್ಣಿನ ಪಾಕ ಸ್ವಲ್ಪ ತಿಂದು ಸ್ವಲ್ಪ ಹಾಲು ಕುಡಿ, ನಾನು ಹೇಳ್ತೀನಿ."

"ನಮ್ಮ ಮನೇಲಿ ನಾವು ಹಾಲಿನ ಕೆನೆ ಜೊತೆಗೂ ಹಣ್ಣಿನ ಪಾಕ ತಿನ್ನೊಲ್ಲ!"

ಹಾಲಿನ ಹೊಳೆ ಅವಳಿಗೆ ಏನೂ ಹೇಳಲಿಲ್ಲ.

ಇಡೀ ದಿನ ಅವಳು ಹೊಲಗಳಲ್ಲೂ ಕಾಡುಗಳಲ್ಲೂ ಅಲೆದಾಡಿದಳು. ಸಂಜೆಯಾಯಿತು. ಮನೆಗೆ ಹೋಗುವುದು ಬಿಟ್ಟು ಅವಳಿಗೆ ಬೇರೇನೂ ಮಾಡಲು ಇರಲಿಲ್ಲ. ಆಗ ಇದ್ದಕ್ಕಿದ್ದಂತೆ

ಅವಳಿಗೆ ಏನು ಕಾಣಿಸಿತು – ಕೋಳಿ ಕಾಲುಗಳ ಮೇಲೆ ನಿಂತ ಒಂದು ಗುಡಿಸಲು. ಅದು ಸುತ್ತ ಸುತ್ತುತ್ತಿತ್ತು. ಅದಕ್ಕೊಂದು ಪುಟ್ಟ ಕಿಟಕಿ ಇತ್ತು.

ಗುಡಿಸಲ ಒಳಗಡೆ ಮಾಟಗಾತಿ ಬಾಬಾ-ಯಾಗಾ ಕುಳಿತಿದ್ದಳು. ಅವಳು ಅಗಸೆ ನಾರನ್ನು ನೂಲುತ್ತಿದ್ದಳು. ಅವಳ ಪಕ್ಕದಲ್ಲೇ ಬೆಂಚಿನ ಮೇಲೆ ಪುಟ್ಟ ಹುಡುಗಿಯ ಪುಟ್ಟ ತಮ್ಮ ಬೆಳ್ಳಿಯ ಸೇಬನ್ನು ಇಟ್ಟುಕೊಂಡು ಆಡುತ್ತಿದ್ದ.

ಪುಟ್ಟ ಹುಡುಗಿ ಒಳಗೆ ಹೋದಳು.

"ನಮಸ್ಕಾರ, ಅಜ್ಜಿ!"

"ನಮಸ್ಕಾರ, ಹುಡುಗಿ. ಏನಮ್ಮ ಇಲ್ಲಿಗೆ ಬಂದೆ?"

"ನನ್ನ ಬಟ್ಟೆಯೆಲ್ಲ ಇಬ್ಬನಿಯಿಂದ ಒದ್ದೆಯಾಗಿ ಬಿಟ್ಟಿದೆ. ಸ್ವಲ್ಪ ಒಣಗಿಸಿಕೊಂಡು ಹೋಗೋಣ ಅಂತ ಬಂದೆ."

"ಸರಿ, ಬಾ. ಕೂತುಕೋ. ಸ್ವಲ್ಪ ಈ ನಾರನ್ನು ನೂಲು."

ಬಾಬಾ-ಯಾಗಾ ಅವಳಿಗೆ ಕದಿರುಕಡ್ಡಿಯನ್ನು ಕೊಟ್ಟು ಹೊರಗೆ ಹೋದಳು. ಪುಟ್ಟ ಹುಡುಗಿ ಕೂತುಕೊಂಡು ನೂಲತೊಡಗಿದಳು. ಆಗ ಇದ್ದಕ್ಕಿದ್ದಂತೆ ಒಂದು ಇಲಿಮರಿ ಒಲೆಯ ಕೆಳಗಿಂದ ಓಡಿಬಂದು ಅವಳಿಗೆ ಹೇಳಿತು:

"ಹುಡುಗಿ, ಹುಡುಗಿ. ನನಗೆ ಕುಡಿಯೋಕೆ ಸ್ವಲ್ಪ ಅಂಬಲಿ ಕೊಡ್ತೀಯಾ. ನಿನಗೆ ಒಂದು ವಿಷಯ ತಿಳಿಸ್ತೀನಿ."

ಪುಟ್ಟ ಹುಡುಗಿ ಅದಕ್ಕೆ ಸ್ವಲ್ಪ ಅಂಬಲಿ ಕೊಟ್ಟಳು. ಇಲಿಮರಿ ಹೇಳಿತು:

"ಬಾಬಾ-ಯಾಗಾ ಒಬ್ಬ ಕೆಟ್ಟ ಮುದುಕಿ. ಅವಳೀಗ ಸ್ನಾನದ ಮನೆಯಲ್ಲಿ ಒಲೆ ಹಚ್ಚೋಕೆ ಹೋಗಿದಾಳೆ. ನಿನಗೆ ಆವಿ ಸ್ನಾನ ಮಾಡಿಸಿ, ಮೈಯನ್ನು ಚೆನ್ನಾಗಿ ತೊಳೆದು, ಆಮೇಲೆ ಒಲೆಯಲ್ಲಿ ಹಾಕಿ ಬೇಯಿಸಿ ತಿನ್ನಲು ಯೋಚಿಸಿದಾಳೆ. ಆಮೇಲೆ ನಿನ್ನ ಮೂಳೆಗಳ ಮೇಲೆ ಸವಾರಿ ಮಾಡಿಕೊಂಡು ಹೋಗ್ತಾಳೆ."

ಪುಟ್ಟ ಹುಡುಗಿ ಹೆದರಿಕೆಯಿಂದ ನಡುಗುತ್ತ ಅಳತೊಡಗಿದಳು. ಇಲಿಮರಿ ಮತ್ತೂ ಹೇಳಿತು:

"ಅಳುತ್ತಾ ಕೂರಬೇಡ. ಬೇಗ ಬೇಗ ನಿನ್ನ ತಮ್ಮನನ್ನು ಎತ್ತಿಕೊಂಡು ಓಡಿ ಹೋಗು. ನಾನು ನಿನ್ನ ಬದಲು ನೂಲುತ್ತಾ ಇರ್ತೀನಿ."

ಅದು ಹೇಳಿದಂತೆಯೇ ಪುಟ್ಟ ಹುಡುಗಿ ತನ್ನ ತಮ್ಮನನ್ನು ಕಂಕುಳಲ್ಲಿ ಎತ್ತಿಕೊಂಡು ಓಡಿದಳು. ಬಾಬಾ-ಯಾಗಾ ಆಗಾಗ್ಗೆ ಕಿಟಕಿ ಬಳಿ ಬಂದು ಕೇಳುತ್ತಿದ್ದಳು:

"ನೂಲುತ್ತಾ ಇದೀಯಾ, ಹುಡುಗಿ?"

ಇಲಿಮರಿ ಉತ್ತರ ಹೇಳುತ್ತಿತ್ತು: "ಹೌದು, ಅಜ್ಜಿ."

ಬಾಬಾ-ಯಾಗಾ ಸ್ನಾನದ ಮನೆಯಲ್ಲಿ ಚೆನ್ನಾಗಿ ಉರಿ ಮಾಡಿ ಪುಟ್ಟ ಹುಡುಗಿಯನ್ನು ಕರೆದುಕೊಂಡು ಹೋಗೋಣ ಅಂತ ಬಂದಳು. ಆದರೆ ಹುಡುಗಿ ಗುಡಿಸಲಿನಲ್ಲಿ ಇರಲೇ ಇಲ್ಲ. ಪುಟ್ಟ ಹುಡುಗನೂ ಇರಲಿಲ್ಲ. ಬಾಬಾ-ಯಾಗಾ ತಕ್ಷಣವೇ ಕೂಗಿ ಹೇಳಿದಳು: "ಬಾತುಕೋಳಿಗಳೇ, ಹೋಗಿ, ಬೇಗ ಹಾರಿ ಹೋಗಿ! ಅವರನ್ನು ಹಿಡಿಯಿರಿ! ಪುಟ್ಟ ಹುಡುಗಿ ಪುಟ್ಟ ಹುಡುಗನನ್ನು ಎತ್ತಿಕೊಂಡು ಹೋಗಿಬಿಟ್ಟಿದ್ದಾಳೆ!"

ಪುಟ್ಟ ಹುಡುಗಿ ತಮ್ಮನನ್ನೂ ಎತ್ತಿಕೊಂಡು ಓಡಿ ಹೋಗುತ್ತ ಹಾಲು ಹೊಳೆಯ ಬಳಿ ಬಂದಳು. ಅಲ್ಲೇನು ಕಾಣುತ್ತೆ ಅವಳಿಗೆ – ಆ ಬಾತುಕೋಳಿಗಳು ಆಗಲೇ ಅವಳ ಸಮೀಪ ಬಂದುಬಿಟ್ಟಿವೆ!

"ಹಾಲು ಹೊಳೆ, ಹಾಲು ಹೊಳೆ, ನಮ್ಮನ್ನು ಸ್ವಲ್ಪ ಮರೆಯಾಗಿ ಇರಿಸ್ತೀಯಾ? ದಯ ವಿಟ್ಟು!" ಎಂದು ಕೇಳಿಕೊಂಡಳು.

"ನನ್ನ ಹಣ್ಣಿನ ಪಾಕಾನ ಸ್ವಲ್ಪ ತಿನ್ನು."

ಪುಟ್ಟ ಹುಡುಗಿ ಸ್ವಲ್ಪ ಹಣ್ಣಿನ ಪಾಕ ತಿಂದು ಹೊಳೆಗೆ ವಂದನೆ ಹೇಳಿದಳು. ಹಾಲು ಹೊಳೆ ಅವಳನ್ನೂ ತಮ್ಮನನ್ನೂ ತನ್ನ ಹಣ್ಣಿನ ಪಾಕದ ದಡಗಳ ನೆರಳಿನಲ್ಲಿ ಮರೆಯಾಗಿಸಿತು.

ಬಾತುಕೋಳಿಗಳು ಅವರನ್ನು ಕಾಣದೆ ಮುಂದೆ ಹಾರಿಹೋದವು.

ಪುಟ್ಟ ಹುಡುಗಿ ಮತ್ತೆ ಮುಂದಕ್ಕೆ ಓಡಿದಳು. ಆದರೆ ಬಾತುಕೋಳಿಗಳು ಹಿಂದಿರುಗಿ ಮತ್ತೆ ಅವಳ ಬಳಿಗೇ ಹಾರಿ ಬರತೊಡಗಿದವು. ಯಾವುದೇ ಘಳಿಗೆಯಲ್ಲೂ ಅವಳು ಅವುಗಳ ಕಣ್ಣಿಗೆ ಬೀಳಲಿದ್ದಳು. ಈಗೇನು ಮಾಡಬೇಕು? ಕಾಡಿನ ಸೇಬುಮರದ ಬಳಿಗೆ ಓಡಿದಳು.

"ಸೇಬುಮರ, ಸೇಬುಮರ, ನಮ್ಮನ್ನು ಮರೆಯಾಗಿ ಇರಿಸ್ತೀಯಾ? ದಯವಿಟ್ಟು!" ಎಂದು ಕೇಳಿಕೊಂಡಳು. "ನನ್ನ ಕಾಡು ಸೇಬು ತಿನ್ನು."

ಪುಟ್ಟ ಹುಡುಗಿ ಒಂದು ಹಣ್ಣು ತಿಂದು ವಂದನೆ ಎಂದಳು. ಸೇಬಿನ ಮರ ಅವರನ್ನು ತನ್ನ ರೆಂಬೆ ಎಲೆಗಳ ಕೆಳಗೆ ಮರೆಯಾಗಿಸಿತು.

ಬಾತುಕೋಳಿಗಳು ಅವರನ್ನು ಕಾಣದೆ ಮುಂದಕ್ಕೆ ಹಾರಿಹೋದವು.

ಪುಟ್ಟ ಹುಡುಗಿ ಮತ್ತೆ ತನ್ನ ತಮ್ಮನನ್ನು ಕಂಕುಳಲ್ಲಿ ಎತ್ತಿಕೊಂಡು ಓಡತೊಡಗಿದಳು. ಅವಳು ಇನ್ನೇನು ಮನೆ ತಲುಪಿದ್ದಳು, ಆಗ ಬಾತುಕೋಳಿಗಳು ಅವಳನ್ನು ನೋಡಿಬಿಟ್ಟವು. ಅವು ಕ್ವಾಕ್ವಾ ಎಂದು ಕೂಗಿದವು, ರೆಕ್ಕೆಗಳನ್ನು ಪಟಪಟನೆ ಬಡಿದವು. ಇನ್ನೊಂದು ನಿಮಿಷ ದಲ್ಲಿ ಪುಟ್ಟ ಹುಡುಗನನ್ನು ಅವಳ ಕೈಯಿಂದ ಕಿತ್ತುಕೊಂಡು ಬಿಡಲಿದ್ದವು.

ಪುಟ್ಟ ಹುಡುಗಿ ಬೇಗ ಒಲೆಯ ಬಳಿಗೆ ಓಡಿದಳು.

"ಒಲೆ, ಒಲೆ, ನಮ್ಮನ್ನು ಮುಚ್ಚಿಡು, ದಯವಿಟ್ಟು!"

"ನನ್ನ ರೈ ರೊಟ್ಟಿ ತಿನ್ನು."

ಪುಟ್ಟ ಹುಡುಗಿ ಒಂದು ರೊಟ್ಟಿ ಚೂರನ್ನು ಬಾಯಲ್ಲಿ ಹಾಕಿಕೊಂಡು ಒಲೆಯ ಒಳಕ್ಕೆ ತಮ್ಮನನ್ನೂ ಕರೆದುಕೊಂಡು ತೆವಳಿಕೊಂಡು ಹೋದಳು.

ಬಾತುಕೋಳಿಗಳು ತುಂಬ ಹೊತ್ತು ಒಲೆಯ ಸುತ್ತವೇ ಕೂಗುತ್ತ ಕೇಕೆ ಹಾಕುತ್ತ ಹಾರಾಡುತ್ತಿದ್ದವು. ಆಮೇಲೆ ಇನ್ನೂ ಅಟ್ಟಿಸಿಕೊಂಡು ಹೋಗುವುದು ಪ್ರಯೋಜನವಿಲ್ಲ ಅಂದುಕೊಂಡು ಬಾಬಾ-ಯಾಗಾಳ ಬಳಿಗೆ ಹಿಂದಿರುಗಿದವು. ಪುಟ್ಟ ಹುಡುಗಿ ಒಲೆಗೆ ವಂದನೆ ಹೇಳಿ ತಮ್ಮನನ್ನೂ ಕರೆದುಕೊಂಡು ಮನೆಗೆ ಓಡಿ ಹೋದಳು.

ಸ್ವಲ್ಪ ಹೊತ್ತಿನಲ್ಲೇ ಅವಳ ಅಪ್ಪನೂ ಅಮ್ಮನೂ ಮನೆಗೆ ಬಂದರು.

ಅನುವಾದ: ಕೆ. ಎಲ್. ಗೋಪಾಲಕೃಷ್ಣರಾವ್

ТЕРЕМ-ТЕРЕМОК
РУССКИЕ НАРОДНЫЕ СКАЗКИ
На языке каннада
THE LITTLE CLAY HUT
Russian Folk Tales About Animals

Перевод сделан по книге
«Терем-теремок», М., «Детская
литература», 1972

Для младшего школьного
возраста

©ಕನ್ನಡ ಭಾಷಾಂತರ ಪ್ರಗತಿ ಪ್ರಕಾಶನ 1982

ಸೋವಿಯತ್ ಒಕ್ಕೂಟದಲ್ಲಿ ಸಿದ್ಧಗೊಳಿಸಿದುದು

T $\frac{70802-185}{014(01)-82}$ 605—82 4803000000